ಇನ್ನೊಂದು ವಿಷಯ. ಕಮಿಷನ್ನಿನವರು ಕೊಟ್ಟಿರತಕ್ಕ ಆಜ್ಞೆಗಳಾಗಲೀ, ಸರ್ಕಾರದವರು ಕೊಡತಕ್ಕ ಆಜ್ಞೆಗಳಾಗಲೀ ಒಂದಕ್ಕೊಂದು ಸರಿಯಾಗಿಲ್ಲವೆಂಬುದಕ್ಕೆ ಅನೇಕ ನಿದರ್ಶನಗಳು ಇದರಲ್ಲಿ ಕಾಣಬಹುದು. ಏಕೆಂದರೆ ಇವತ್ತು ಕೋರ್ಟುಗಳಲ್ಲಿ ರಿಟ್ ಅರ್ಜಿಗಳ ಸುರಿಮಳೆಯಂತೂ ಹೇಳುವುದಕ್ಕಾಗುವುದಿಲ್ಲ. ಹೈಕೋರ್ಟಿಗೆ ಹೋಗಿ ಸರ್ಕಾರೀ ಆಜ್ಞೆ ಮತ್ತು ಕಮಿಷನ್ನಿನವರ ಆಜ್ಞೆಗಳ ಮೇಲೆ ಚಾರೆಂಜ್ ಮಾಡಿರುವ ದೃಷ್ಟಾಂತಗಳು ಇದರಲ್ಲಿ ನಾವು ಎಷ್ಟೋ ಕಾಣಬಹುದು. ಇವತ್ತಿನ ದಿವಸ ಸರ್ಕಾರದವರು ಕಾನೂನುಗಳನ್ನು ಸರಿಯಾಗಿ ಅನುಸರಿಸುತ್ತಿಲ್ಲವೆಂಬುದಾಗಿ ಸರ್ಕಾರದ ಮೇಲೆ ಸ್ಟ್ರಿಕ್ಚರ್ಸ್ ಪಾಸ್‌ಮಾಡಿ ಕಳುಹಿಸಿರುವುದು ವಿಶೇಷವಾಗಿ ಕಂಡುಬರುತ್ತಿವೆ. ಇವತ್ತಿನ ದಿವಸ ಸೀನಿಯಾರಿಟಿ ಮೇಲೆ ಬೇರೆ ಈ ವರದಿಯಲ್ಲಿ ಹೇಳಿದ್ದಾರೆ. ಜೊಂಬಾಯಿ ಕರ್ನಾಟಕ, ಹೈದರಾಬಾದ್ ಕರ್ನಾಟಕ ಹಳೆ ಮೈಸೂರು–ಈ ಪ್ರಾಂತಗಳ ಸೀನಿಯಾರಿಟಿ ಲಿಸ್ಟ್ ಸುಮಾರು 7 ವರ್ಷಗಳಿಂದಲೂ ಇನ್ನೂ ಮಾಡಿಲ್ಲ. ಪ್ರತಿವರ್ಷವೂ ಈ ವಿಚಾರದಲ್ಲಿ ನಾವು ಹೇಳುತ್ತಿದ್ದರೂ ಅದರಕಡೆ ಸರ್ಕಾರ ಗಮನ ಕೊಟ್ಟಹಾಗೆ ಕಾಣಲಿಲ್ಲ. ಕತ್ತಲಲ್ಲಿಯೇ ಇವರು ಇನ್ನೂ ಹೋಗುತ್ತಿದ್ದಾರೆಂದು ನನಗೆ ತೋರುತ್ತದೆ. ಸರ್ಕಾರದವರು ಕಟ್ಟುನಿಟ್ಟಾದ ರೂಲ್ಸ್ ಮತ್ತು ರೆಗ್ಯುಲೇಷನ್ಸ್ ಮಾಡಿದ ಮೇಲೆ ಅವರೂ ಸಹ ಅದೇ ರೀತಿಯಾಗಿ ನಡೆಯಬೇಕು. ಮುಂದಿನ ವರ್ಷವಾದರೂ ಇಂತಹ ಪ್ರಮೇಯಗಳು ಆಗದಂತೆ ಈಗಲಿಂದಲೇ ಸರ್ಕಾರ ಎಚ್ಚರಿಕೆ ವಹಿಸಿ ನೋಡಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ರಿ-ಎಂಪ್ಲಾಯ್‌ಮೆಂಟ್ ಬಗ್ಗೆ ಒಂದು ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ನಾನು ಕೇಳಿದ ಹಾಗೆ ಇವತ್ತು ಅನಿಮಲ್ ಹಸ್ಬೆಂಡ್ರಿ ಇಲಾಖೆಗೆ ಒಬ್ಬ ರಿಟೈರ್ಡ್

(ಶ್ರೀ ಸಿದ್ದಯ್ಯ ಕಾಶೀಮಠ)

ಆಫೀಸರನ್ನು ನೇಮಕ ಮಾಡುತ್ತೇವೆಂದು ಈ ಸರ್ಕಾರ ಹೊರಟಿರುವುದು ಸರಿಯಲ್ಲ. ಸರ್ಕಾರದವರು ಈ ರೀತಿ ಪ್ರತಿಯೊಂದು ಇರಾಖೆಯಲ್ಲಿ ರಿಟ್ಯೈರ್ಡ್ ಆಗಿರುವವರನ್ನು ರಿ-ಎಂಪ್ಲಾಯ್ ಮಾಡುವುದಕ್ಕಾಗಿ ಅನೇಕ ಪ್ರೊಪೋಸಲ್‌ಗಳನ್ನು ಕಮಿಷನ್ರಿನವರ ಮನ್ನಣೆಗೆ ಕಳುಹಿಸಿರುವುದು ಸರಿಯೆ ? ಈ ಸಂದರ್ಭದಲ್ಲಿ ಬಹುಶಃ ರಿಟ್ಯೈರ್ಡ್ ಆಗಿರುವವರೊಬ್ಬರನ್ನು ಅನಿಮಲ್ ಹಸ್ಬೆಂಡ್ರಿ ಇರಾಖೆಗೆ ಡೈರೆಕ್ಟರ್ ಆಗಿ ನೇಮಕಮಾಡಿದರೆ ಯಾವ ನ್ಯಾಯ ? ಈಗ ಇರತಕ್ಕಂಥ ನೌಕರರಿಗೆ ಇದರಿಂದ ಪ್ರೊಮೋಷನ್ ಕೊಡುವುದು ತಪ್ಪಿಹೋಗಿ ಅವರಿಗೆ ಯಾವ ಗತ್ಯಂತರವಿಲ್ಲದೆ ಹೈಕೋರ್ಟಿಗೆ ಹೋಗಿ ರಿಟ್ ಹಾಕುವ ಪ್ರಸಂಗಗಳು ಉದ್ಭವಿಸುತ್ತವೆ. ಇಂತಹ ಪ್ರಸಂಗಗಳಾಗದಂತೆ ಸರ್ಕಾರ ನೋಡಿಕೊಳ್ಳುವುದು ಅವರ ಆದ್ಯ ಕರ್ತವ್ಯ. ಆದ್ದರಿಂದ ಇನ್ನು ಮುಂದೆ ರಿಟ್ಯೈರ್ಡ್ ಆಗಿರುವವರನ್ನು ಇಂತಹ ಕೆಲಸಗಳಿಗೆ ಯಾವ ಇಂಪ್ಲೊಯನ್ಸ್ ಬಂದರೂ ಅದನ್ನು ತಡೆಗಟ್ಟಿ ತಮ್ಮವರಿಗಾಗಲೀ ಅಥವಾ ಯಾರಿಗೇ ಆಗಲಿ ನೇಮಿಸಬಾರದೆಂದು ನಾನು ಸರ್ಕಾರದವರಿಗೆ ಈ ಸಮಯದಲ್ಲಿ ಹೇಳುತ್ತೇನೆ.

ಇನ್ನು ಸ್ಟೇಟ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿಗಳಿಂದ ನಮಗೆ ಬಹಳ ಪ್ರಯೋಜನವಿದೆ. ಇವುಗಳಿಂದ ಆದಷ್ಟುಮಟ್ಟಿಗೆ ಹೆಚ್ಚು ಹೆಚ್ಚಾಗಿ ಸಣ್ಣ ಸಣ್ಣ ನೌಕರರುಗಳಿಗೆ ಅನುಕೂಲವಾಗುವುದರಿಂದಲೂ ಮತ್ತು ಅರ್ಜಿಗಳು ಹೆಚ್ಚು ಹೆಚ್ಚಿಗೆ ಬರುತ್ತಿರುವುದರಿಂದಲೂ ಆಯಾ ಡಿವಿಜನ್ನುಗಳಲ್ಲಿ ಇಂತಹ ಕಮಿಟಿಗಳನ್ನು ನೇಮಕ ಮಾಡುವುದು ಒಳ್ಳೆಯದು. ಇದರಿಂದ ಸರ್ಕಾರಕ್ಕೆ ಖರ್ಚೂ ಸಹ ಕಮ್ಮಿಯಾಗುತ್ತದೆ. ಮತ್ತು ಅನುಕೂಲಗಳೂ ಸಹ ಇರುತ್ತವೆ. ಈ ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಮೂರುಮಂದಿ ಮಾಡಿ ಉಳಿದ ಇಬ್ಬರು ಮಂದಿ ಮಾಡತಕ್ಕ ಕೆಲಸಗಳನ್ನು ಸ್ಟೇಟ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿ ಆಡಳಿತ ಮುಖಾಂತರ ನಿರ್ವಹಿಸುವುದು ಉಚಿತ. ಅಲ್ಲದೆ ಇನ್ನೂ ಹೆಚ್ಚಿನ ಕಾನೂನುಗಳನ್ನು ಅವರು ಅಳವಡಿಸುವಂತೆ ಹೆಚ್ಚಿನ ಅಧಿಕಾರವನ್ನು ಕೊಡಬೇಕು ಸ್ಟೇಟ್‌ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿಗಳೂ ಸಹ ಅವರನ್ನು ಅದರಲ್ಲಿ ಕಾರ್ಯತತ್ಪರರನ್ನಾಗಿ ಮಾಡುವುದು ಯೋಗ್ಯ. ಆದ್ದರಿಂದ ಸ್ಟೇಟ್‌ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ರಚಿಸಬೇಕೇ ಹೊರ್ತು ಇದರಿಂದ ತಗೆಯಬಾರದು, ಈಗಿರತಕ್ಕ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಐದುಮಂದಿ ಇರುವುದನ್ನು ಮೂರು ಮಂದಿಯನ್ನಾಗಿ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

‡ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ತಗ ನಾವು ಇಲ್ಲಿ ಬಂದು ಕೆಲಸಮಾಡುವುದಕ್ಕೆ ಕುಳಿತಿದ್ದೇವೆ. ಅದಕ್ಕೆ ಕಾರಣ ಈಗ ಡೆಮಾಕ್ರಸಿ ಬಂದಿರುವುದೇ ಆಗಿದೆ. ಈಗ ಜನಗಳು ಏನು ಹೇಳುತ್ತಾರೆಂದರೆ * * *ಈ ಕಡೆ ಗೌರ್ನಮೆಂಟ್, ಆ ಕಡೆ ಪಬ್ಲಿಕ್ ಸರ್ವಿಸ್ ಕಮಿಷನ್. ಈಗ ಇದಕ್ಕೆ ಕಾರಣವೇನೆಂಬುದನ್ನು ನಾವು ನೋಡಬೇಕಾಗಿದೆ.

Sri A. P. APPANNA (Virajpet).—On a point of order. Can the Hon. Member say that? Those words should be expunged.

Mr. DEPUTY SPEAKER.—He cannot criticise the Public Service Commission in that way. The Public Service Commission is an exalted body like the High Court. He can say that they are wrong but he cannot use those words. He will have to withdraw it.

Sri V. M. DEO.—I said that we have come here to function here because there is something like democracy. If the Hon. Member does not care for the people, the Chair should give direction so that his understanding of democracy may be corrected. The Chair must help him to understand him. Please consider my reference in the context.

Mr. DEPUTY SPEAKER.—The Hon. Member can say that the Commission is wrong but it is not in keeping with the dignity of the House or of the Members of the House to call the Commission * * * *

Sri V. M. DEO.—You can give a ruling as you like because you dislike me. But you must hear me. Only then it can be binding. You have been appointed as Deputy Speaker. You have solemnly promised

***Expunged as ordered by the chair.

to the people that we are going to work their good. Now the peoples' voice must be heard here. Does the Hon. Member want that peoples' voice must be throttled in this House ?

Mr. DEPUTY SPEAKER.—The Hon. Member is going astray.

Sri V. M. DEO.—You must understand me. That is my contention. I started by saying that it is what the people are saying. If you say that this Assembly is not responsible to the people, it is different altogether. I thought you would throw some light so that he will understand properly and know what point to raise.

[MR. SPEAKER in the Chair.]

Sri A. P. APPANNA.—The Chair has given a ruling. The hon. Member said that both the ruling party and the Public Service Commission* * * *

(There were protests)

He said that Government and the Public Service Commission * * * *

Mr. SPEAKER.—Let me understand it properly. What does Sri Deo say ?

Sri V. M. DEO.—I said that all of us have gathered here for the deliberation, only because the people have elected us on the promise that we will work for their good. People say, not I * * * *

Mr. SPEAKER.—People say that * * * * Thereby, the Hon. Member wants to disown responsibility. Does he take the responsibility for their saying and does he put it to the House as his own feeling ?

Sri V. M. DEO.—I want to function with a sort of responsibility.

Mr. SPEAKER.—When they say this, I want to examine it in the proper context as to what exactly it means.

Sri V. M. DEO.—You cannot come to any particular conclusion because I have not examined the thing.

Mr. SPEAKER.—May I ask the Hon'ble Member to resume his speech after he has come to a conclusion ?

Sri V. M. DEO.—I have come to a conclusion.

Mr. SPEAKER.—Either he has to say 'I take the responsibility' or 'I am not able to judge'. This is a very serious charge that is made and so I wolud like the House to examine it.

Sri V. M. DEO.—There are a few things which the Chair can answer straightaway. It is like the rule of three and the Chair, I am sure the Hon'ble Member understands this very well.

Mr. SPEAKER.—The member should till the chair whether that is his opinion or whether that is what some people have said so.

Sri V. M. DEO.—What does Deo count ? It is the people who count.

Mr. SPEAKER.—I have to give a ruling.

Sri V. M. DEO.—The Chair may please hear me.

---

* ** Expunged as ordered by the Chair

Sri S. RAJAGOPAL.—The Deputy Speaker gave a ruling in the House saying that the Hon'ble Member must withdraw those words. I do not know what happened to that ruling.

Mr. SPEAKER.—If he has given a ruling to that effect it is binding on all including Sri Deo and me.

Sri S. RAJAGOPAL.—Subsequently Hon'ble Member addressed the Chair. So I would request the Chair to understand the situation fully and then give a ruling.

Sri V. M. DEO.—Please see that there is a proper atmosphere.

Mr. SPEAKER.—My difficulty is that he is so delicate that I cannot follow him.

Sri V. M. DEO.—I think I must have a Rhinocero's skin. I am an honest man and I say what I honestly feel. I do not think that the Chair can help me out of the situation.

Mr. SPEAKER.—My personal feeling as a lawyer or as a politician does not count at all. Now the ruling has been given and the ruling is that the member may continue the speech.

Sri A. P. APPANNA.—What about the ruling that he must withdraw those words ?

Mr. SPEAKER.—I will get them expunged.

Sri V. M. DEO.—The ruling that was given was not complete.

Mr. SPEAKER.—I will study it further and take it up tomorrow.

ಶ್ರೀ ವಿ. ಎಂ. ದೇವ್.—ಈಗ ಪಬ್ಲಿಕ್ ಸರ್ವೀಸ್ ಕಮಿಷ್ಷನರ ಕೆಲಸ ಏನೆಂದರೆ ಜನಗಳನ್ನು ಕೆಲಸಕ್ಕೆ ತೆಗೆದುಕೊಳ್ಳುವುದು, ಕೆಲವು ಪ್ರಮೋಷನ್‌ಗಳನ್ನು ಕೊಡುವುದು ಅಡ್‌ಹಾಕ್ ಬೇಸಿಸ್ ಮೇಲೆ ಕೆಲಸಕ್ಕೆ ನೇಮಿಸುವುದು, ಮತ್ತು ಇದರ ಜೊತೆಗೆ ರಿಬ್ಬೇರ್ ಆದವರ್ಲ್ಲಿ ಕೆಲವರನ್ನು ರೀ ಎಂಪ್ಲಾಯ್ ಮಾಡುವುದು ಇಷ್ಟು ಕೆಲಸಗಳು ಪಬ್ಲಿಕ್ ಸರ್ವೀಸ್ ಕಮಿಷ್ಷನರಿಗೆ ಇವೆ. ಇದರ ಜೊತೆಗೆ ಕೆಲವು ಅಪಾಯಿಂಟ್‌ಮೆಂಟ್‌ಗಳನ್ನು ಮಾಡುವಾಗ ಸರ್ಕಾರದವರೇನಾದರೂ ಪಬ್ಲಿಕ್ ಸರ್ವೀಸ್ ಕಮಿಷ್ಷನರವರ ಅಭಿಪ್ರಾಯವನ್ನು ಕೇಳಿದಾಗ ಅಡ್ವೈಜ್ ಕೊಡುವುದಕ್ಕೂ ಇದು ಇದೆ. ಯಾವ ಬೇಸಿಸ್ ಮೇಲೆ ಕೆಲಸಗಳನ್ನು ಕೊಡುತ್ತಾರೆ ಎನ್ನುವುದನ್ನೂ ಸ್ವಲ್ಪ ನಾವು ನೋಡಬೇಕಾಗುತ್ತದೆ. ಈ ಪಬ್ಲಿಕ್ ಸರ್ವೀಸ್‌ಕಮಿಷನ್ನಿನ ವರದಿಯಲ್ಲಿ ಕೊನೆಗೆ ಜನರಲೈಜ್ ಆಗಿ ಒಂದು ಮಾತನ್ನು ಹೇಳಿದ್ದಾರೆ. ಆ ಮಾತುಗಳನ್ನು ಬಹಳ ಕಟುವಾಗಿಯೂ ಹೇಳಿದ್ದಾರೆ. ಅದು ಈ ರೀತಿ ಇದೆ.

> "The Commission feel that the above instructions are observed more in the breach." What makes these reports undependable is the sudden change of the merits of the officer debated upon into demerits as soon as there is a change in the reporting officer. These are serious lapses and call for urgent and serious action if the confidential reports are to serve the purpose for which they are prepared."

ಎಂದು ಇದೆ. ಕೆಲವು ಕಡೆ ಏನು ಹೇಳಿದ್ದಾರೆಂದರೆ ಇಂತಿಂಥಾ ಕೇಸುಗಳು ಇದ್ದುವು ಅವುಗಳ ವಿಷಯದಲ್ಲಿ ಇಂತಿಂಥಾ ತೀರ್ಮಾನಗಳನ್ನು ಕೈಗೊಳ್ಳಲಾಯಿತು ಎನ್ನುವ ವಿಷಯಗಳು ಬರುತ್ತವೆ. ಕೆಲವು ಸಂದರ್ಭದಲ್ಲಿ ಕೆಲವು ಕೆಲಸಗಳಿಗೆ ನೇಮಕ ಮಾಡುವಾಗ ರೆಕ್ರೂಟ್‌ಮೆಂಟ್ ರೂಲ್ಸನ್ನು ಮೀರಿದು ನೇಮಕ ಮಾಡಿದ್ದಾರೆ. ಅಂಥಾ ಕೇಸುಗಳು ಕೋರ್ಟಿಗೆ ಹೋದಾಗ ಆದಕ್ಕೆ ಸಂಬಂಧಪಟ್ಟವರನ್ನೇ ಪಾರ್ಟಿಯನ್ನಾಗಿ ಮಾಡಿ ಅವರೇ ರಾಜೀ ಕಬೂಲಿ ಮಾಡಿದ್ದಾರೆ. ಇದನ್ನು ನೋಡಿದರೆ ಏನು ತೋರುತ್ತದೆ ಎಂದರೆ ಸರ್ಕಾರದವರು ಸಮಾಜವಾದ ತತ್ವವನ್ನು ಅನುಸರಿಸಿಕೊಂಡು ಬರುತ್ತಿದೆ ಎಂದು ಹೇಳಿ ಆ ತತ್ವಕ್ಕೆ ವಿರೋಧವಾಗಿ ಕಾರ್ಯಾಚರಣೆ ಮಾಡುತ್ತಿದ್ದಾರೋ ಏನೋ ಎಂದು ಅನಿಸುತ್ತದೆ. ಸ್ವತಂತ್ರ ಭಾರತ ಅಸ್ತಿತ್ವಕ್ಕೆ ಬಂದಮೇಲೆ ದೇಶದಲ್ಲಿ ನಿರುದ್ಯೋಗ ಇರ

ಕೂಡದು ಎಂದು ಇದ್ದರೂ ಕೂಡ ನಿರುದ್ಯೋಗ ಜಾಸ್ತಿ ಆಗುತ್ತಿದೆ. ಇದಕ್ಕೆಲ್ಲಾ ಕಾರಣವೇನೆಂದರೆ ನೆಪೋಟಿಜಮ್ ಇರುವುದು. ನವಾಜವಾದ ತತ್ವದ ಪ್ರಕಾರ ಆರ್ ಮೆನ್ ಆರ್ ಬಾರನ್ ಈಕ್ವಲ್. ಅವ್ವರಿಂದ ನಿರುದ್ಯೋಗ ಸಮಸ್ಯೆ ಪರಿಹಾರವಾಗುವ ವರೆಗೆ ಎಲ್ಲಾ ಪಾರ್ಟಿ ಪಂಗಡಗಳನ್ನು ಬಿಟ್ಟು ಬಿಡೋಣ; ಯಾವ ಕೋಮುವಾರಭಾವನೆಯನ್ನಾಗಲೀ ಮತ್ತೆ ಯಾವ ಭೇದ ಭಾವನೆಯನ್ನು ಹೊಂದುವುದು ಬೇಡ ಎಂದು ಹೇಳಿ ಎಲ್ಲರೂ ಒಂದೇ ಎನ್ನುವಂಥಾ ಒಂದು ತತ್ವವನ್ನು ಅನುಸರಿಸ ಬೇಕಾಗಿತ್ತು ಅದರಲ್ಲಿ ಏನಾದರೂ ಸ್ವಲ್ಪ ವ್ಯತ್ಯಾಸವಾಯಿತು ಎಂದರೆ ಹಿಂದುಳಿದವರಿಗೆ ಮತ್ತು ಅಲ್ಪ ಸಂಖ್ಯಾತರಿಗೆ ಅನುಕೂಲವಾಗುವಂತಹ ಒಂದು ಎಂಪ್ಲಾಯ್‌ಮೆಂಟ್ ಪ್ಯಾಟ್ರನ್ ಬರಬೇಕಾಗಿತ್ತು. ಈಗ ಮಾಡಿರತಕ್ಕ ಎಂಪ್ಲಾಯ್‌ಮೆಂಟಿನಲ್ಲಿ ಯಾವ ಒಂದು ನೀತಿ ನಿಯಮವೂ ಇಲ್ಲದಂತೆ ಕಾಣುತ್ತಿದೆ. ಇದು ಯಾವ ತರಹ ಇರಬೇಕು ಎಂದರೆ 'Historical records of each administrative unit and and executive unit must be maintained.

4-00 P.M.

ಕಾರ್ಫಿಡೆನ್‌ಷಿಯಲ್ ರಿಪೋರ್ಟ್ ಇಲ್ಲವೆಂದು ಅವರು ಬಹಳ ಚೆನ್ನಾಗಿ ಹೇಳಿದ್ದಾರೆ.

"Preparation and maintenance of annual confidential dossier, by the Reporting Officers and Heads of Departments appears to be in a very sad state affairs indeed. As previously reported, cases of promotion referred to the Commission for consultation are sometimes not accompanied by these annual reports on the Officers proposed for promotion. On request to make them available, the Commission are sometimes informed of their non-availability because they had not been prepared at all or if prepared they have been misplaced. Sometimes they are furnished after a considerable length of time, extending in some cases to over a year. Cases have also come to the notice of the Commission where these annual reports have been prepared years after the period to which they purport to relate."

ಹೀಗೆ ಹೇಳಿದರೆ ಏನು ಸ್ವಾಮಿ! ಇದರಲ್ಲಿರುವ ಕೊನೆ ವಾಕ್ಯವನ್ನು ನೋಡಿದರೆ ಚೆನ್ನಾಗಿ ಅರ್ಥವಾಗುತ್ತದೆ.

I am asking the Government whether fabricated confidential reports have not been furnished to the Public Service Commission.

ಹೀಗಿರುವುದರಿಂದ ಏನಾಗಿದೆ ಎಂದರೆ ಮೊದಲನೆಯದಾಗಿ ಒಂದು ನೀತಿಯನ್ನು ಅನುಸರಿಸುವುದಿಲ್ಲ. ಒಬ್ಬ ಮನುಷ್ಯನು ಪ್ರಮೋಷನ್ ಪಡೆಯುವುದಕ್ಕೆ ಆರ್ಹನೇ ಅಲ್ಲವೇ ಎನ್ನುವುದಕ್ಕೆ ಯಾವ ಆಧಾರವೂ ಇಲ್ಲ. ಹೀಗೆ ಯಾವ ಆಧಾರವೂ ಇಲ್ಲದೆ ಪ್ರಮೋಷನ್ ಕೊಡುತ್ತಿರಬೇಕಾದರೆ, ಜನತೆಯ ಮನಸ್ಸಿನಲ್ಲಿ ಒಂದು ವಿಷಯ ಚೆನ್ನಾಗಿ ಬೇರೂರಿದೆ. ಎಲ್ಲ ನೆಪಾಟಿಸಂ, ಪಸನಲ್ ಲೈಕ್ಸ್ ಅಂಡ್ ಡಿಸ್‌ಲೈಕ್ಸ್, ಈ ದೃಷ್ಟಿಯಿಂದ ಇವರು ಕೆಲಸ ಮಾಡುತ್ತಿದ್ದಾರೆ ಎಂದು ಜನ ಹೇಳುತ್ತಾರೆ. ಆ ದೃಷ್ಟಿಯಿಂದ ನೋಡಿದರೆ ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿಯೂ ಬಹಳ ನ್ಯೂನತೆಗಳಿವೆ, ಹಾಗೆಯೇ ಸರ್ಕಾರದಲ್ಲಿಯೂ ಬಹಳ ನ್ಯೂನತೆಗಳಿವೆ; ಎಂದು ಜನತೆಗೆ ಬಹಳ ಚೆನ್ನಾಗಿ ಗೊತ್ತಿದೆ. ಅವರು ಹೇಳುವುದನ್ನೆಲ್ಲ ನೋಡಿದರೆ ದಿ ವೇರರ್ ನೋಸ್ ವೇರ್ ದಿ ಪೂ ಪಿಂಚೆಸ್ ಎನ್ನುವ ಹಾಗೆ ಇದೆ. ಪಬ್ಲಿಕ್ ಸರ್ವಿಸ್ ಕಮಿಷನ್ ಸರ್ಕಾರದಲ್ಲಿರುವ ಲೋಪ ದೋಷಗಳನ್ನು ಎತ್ತಿ ತೋರಿಸುತ್ತದೆ ಸರ್ಕಾರ ಮಾಡುವುದರಲ್ಲಿ ಅಡ್ವೈಸ್ ಕೊಡುವುದು ಎಂದು ಹೇಳುತ್ತಾರೆ. ಆದರೆ ಅದಕ್ಕೆ ಯಾವ ಅಳತೆಗೋಲೂ ಇಲ್ಲ. ನಮಗೆ ಇದರಲ್ಲಿ ಅಡ್ವೈಸ್ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರೆ ಹೇಗೆ? ಈ ದೃಷ್ಟಿಯಿಂದ ನಾನು ವಿಶಾಲ ಭಾಷೆಯನ್ನು ಉಪಯೋಗಿಸಿ * * *

MR. SPEAKER.—A Ruling has been given that the word is not proper.

***Expunged as ordered by the Chair

Sri V. M. DEO.—I thought you may be prepared to listen and that was why I was explaining with refernce to the context.

Mr. SPEAKR.—I fully understood it. If there is any scope for further Debate, I will look into it. In the meanwhile the Hon'ble Member may continue his speech without using the word as against the Government and the Public Service Commission.

ಶ್ರೀ ವಿ. ಎಂ. ದೇವ್.—ಆದುದರಿಂದ ನಾನು ಇಷ್ಟು ಹೇಳುತ್ತೇನೆ ಸ್ವಾಮಿ. ಸರ್ಕಾರ ಜನತೆಗೆ ಏನು ಆಶ್ವಾಸನೆಯನ್ನು ಕೊಟ್ಟು ಅಸ್ತಿತ್ವಕ್ಕೆ ಬಂದಿದೆಯೋ ಅದನ್ನು ಉಳಿಸಿಕೊಂಡಿಲ್ಲ. ಅದನ್ನು ಉಳಿಸಿಕೊಂಡಿದ್ದರೆ ಇಷ್ಟು ಹೊತ್ತಿಗೆ ನಿರುದ್ಯೋಗ ಸಮಸ್ಯೆಯು ಹೊರಟುಹೋಗಿ ಕೆಲಸವನ್ನು ನಡೆಸುವುದಕ್ಕೆ ಜಾಸ್ತಿ ಜನ ಬೇಕು ಎನ್ನುವ ಪರಿಸ್ಥಿತಿ ಬರಬೇಕಾಗಿತ್ತು. ಅದೂ ಅಲ್ಲದೆ ಪ್ರತಿಯೊಂದು ಇಲಾಖೆ, ಪ್ರತಿಯೊಂದು ಅಡ್ಮಿನಿಸ್ಟ್ರೇಟಿವ್ ಯೂನಿಟ್, ಎಕ್ಸಿಕ್ಯೂಟಿವ್ ಯೂನಿಟ್ ನಲ್ಲಿ ಹಿಂದೆ ಹಿಸ್ಟಾರಿಕಲ್ ರಿಕಾರ್ಡ್ ಇತ್ತು. ಅದರ ಜೊತೆಗೆ ಪರ್ಸನಲ್ ಡಾಕ್ಯುಮೆಂಟನ್ನು ಆಯಾ ಕಾಲಕ್ಕೆ ಸರಿಯಾಗಿ ಭರ್ತಿ ಮಾಡಿ ಕಳಿಸಬೇಕಾಗಿತ್ತು. ಈ ದೃಷ್ಟಿಯಿಂದ ನಾನು ಕೇಳುವುದು ಇಷ್ಟು.

"Cases have also come to the notice of the Commission where these annual reports have been prepared years after the period to which they purport to relate."

Is this not a thing on which serious action has to be taken by the Government ?

ಇಷ್ಟು ಆದಾಗ ಪ್ರಮೋಷನ್ ಕೊಡುವುದರಲ್ಲಿ ದುರಾಡಳಿತವಾಗಿರುವುದು ಬಹಳ ಅಪರಾಧ. ಹಾಗೆ ಆದಮೇಲೂ ಕೂಡ ಸರ್ಕಾರದವರು ಕಣ್ಣು ಮುಚ್ಚಿ ಕುಳಿತಿರುವುದು ದುರದೃಷ್ಟಕರ. ಪ್ರತಿಯೊಂದು ಯೂನಿಟ್ಟಿಗೂ ಹಿಸ್ಟಾರಿಕಲ್ ರಿಕಾರ್ಡ್ ಇದ್ದರೆ ಆ ಮನುಷ್ಯ ಆ ಯೂನಿಟ್ಟಿನಲ್ಲಿ ಕೆಲಸ ಮಾಡುವಾಗ ಎಷ್ಟು ಕೆಲಸ ಮಾಡಬೇಕೋ ಅಷ್ಟನ್ನು ಮಾಡಿದನೇ ಇಲ್ಲವೇ, ಅವನು ಸರಿಯಾಗಿ ಕೆಲಸ ಮಾಡುತ್ತಿದ್ದನೇ ಇಲ್ಲವೇ ಎನ್ನುವುದೆಲ್ಲ ಗೊತ್ತಾಗುತ್ತಿತ್ತು. ಕಾನ್‌ಫಿಡೆನ್‌ಷಿಯರ್ ರಿಪೋರ್ಟ್ ಬರೆಯಬೇಕಾಗಿದ್ದರೆ ಮೆರಿಟ್ಸ್ ಅಂಡ್ ಡಿಮೆರಿಟ್ಸ್ ಬರೆಯಬೇಕಾದರೆ ಸಂಬಂಧಪಟ್ಟವರ ವಿಷಯಗಳೆಲ್ಲ ಅದರಲ್ಲಿ ಗೊತ್ತಾಗುತ್ತದೆ.

ಆದುದರಿಂದ ಕಮಿಷನ್ನಿಗೆ ಒಂದು ಆದೇಶವನ್ನು ಕೊಡಬೇಕೆಂದು ನಾನು ಹೇಳುತ್ತೇನೆ. ಪ್ರತಿಯೊಬ್ಬ ಮನುಷ್ಯನೂ ಒಂದೊಂದು ಯೂನಿಟ್ಟಿನಲ್ಲಿ ಕೆಲಸ ಮಾಡುತ್ತಾ ಇರುತ್ತಾನೆ. ಎಷ್ಟು ಕೆಲಸವನ್ನು ಮಾಡಬೇಕಾಗಿತ್ತೋ ಅಷ್ಟು ಕೆಲಸವನ್ನು ಮಾಡಿಲ್ಲದೆ ಇರಬಹುದು ಅಥವಾ ಇನ್ನೂ ಹೆಚ್ಚಾಗಿ ಕೆಲಸ ಮಾಡುತ್ತಿರಬಹುದು. ಇದರ ಜೊತೆಗೆ ಆ ಮನುಷ್ಯ ಯಾವ ಪಾತ್ರವನ್ನು ವಹಿಸಿದ್ದಾನೆ ಎನ್ನುವುದೂ ಕಾನ್‌ಫಿಡೆನ್‌ಷಿಯಲ್ ರಿಪೋರ್ಟಿನಲ್ಲಿ ಬರಬೇಕು. ಇದರ ಮೇಲೆ ಸರ್ಕಾರ ಒಂದು ಕ್ರಮ ತೆಗೆದುಕೊಳ್ಳುವುದಕ್ಕೆ ಒಂದು ದಾರಿಯಾಗುತ್ತದೆ. ಆದುದರಿಂದ ನಾನು ಹೇಳುವುದು, ಈ ನಿರ್ದಿಷ್ಟ ನಲಹೆಯನ್ನು ಆದಷ್ಟು ಬೇಗ ಜಾರಿಗೆ ತರಬೇಕು.

ಇನ್ನೊಂದು ವಿಷಯವೇನೆಂದರೆ, ಇದು ಗುರುತರವಾದ ಆಪಾದನೆ ಎಂದು ಬಹಳ ಜನ ಹೇಳುತ್ತಾರೆ. ಹಿಸ್ಟಾರಿಕಲ್ ರಿಕಾರ್ಡ್ ಎಂದು ಏನಿತ್ತು, ಆದನ್ನೆಲ್ಲ ಈ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ತೆಗೆದುಹಾಕಿದರು ಎಂದು ಹೇಳುತ್ತಾರೆ. ಈಗಿನ ಸಂಪ್ರದಾಯವೇನಿದೆ ಎಂದರೆ ಅವರು ಮಾಡುವ ಕೆಲಸ, ಆ ಯೂನಿಟ್ ಎಲ್ಲ ಪೈಂಡ್ ಆಪ್ ಆದಮೇಲೆ ಯಾರಾದರೂ ಒಬ್ಬ ಅಧಿಕಾರಿಗೆ ಆ ಹಿಸ್ಟಾರಿಕಲ್ ರಿಕಾರ್ಡ್ ಬರೆಯುವುದಕ್ಕೆ ಪ್ರತ್ಯೇಕವಾಗಿ ಸಂಬಳ ಕೊಟ್ಟು ಕಳಿಸುತ್ತಾರೆಂದು ಹೇಳುತ್ತಾರೆ.

ಇದರ ಅರ್ಥ ವ್ಯಾಪ್ತಿಯನ್ನು ತಾವು ತಿಳಿದುಕೊಳ್ಳಬೇಕು. ಮಾಡುವುದೆಲ್ಲವನ್ನೂ ಮಾಡಿ ಅನುಕೂಲ ಸಿಂಧು ಬರೆಯುವವರನ್ನು ಕಳುಹಿಸುತ್ತಾರೆ. ಹೀಗಾಗಬಾರದು. ಪ್ರತಿಯೊಬ್ಬ ಮನುಷ್ಯನೂ ಎಷ್ಟೆಷ್ಟು ಕೆಲಸ ಮಾಡುತ್ತಾನೆ, ಪ್ರತಿ ದಿವಸ, ತಿಂಗಳು ಮತ್ತು ವರ್ಷದಲ್ಲಿ ಎಷ್ಟು ಕೆಲಸ ಮಾಡುತ್ತಾನೆ, ಹೇಗೆ ಮಾಡುತ್ತಾನೆ ಎಂಬ ಬಗ್ಗೆ ಹಿಸ್ಟಾರಿಕಲ್ ರಿಕಾರ್ಡು ಇರಬೇಕು. ಕಾನ್‌ಫಿಡೆಷಿಯಲ್ ರಿಕಾರ್ಡು ಪ್ರಾಮಾಣಿಕವಾಗಿರಬೇಕು. ಒಂದೊಂದು ಯೂನಿಟ್ಟಿಗೂ ಹಿಸ್ಟಾರಿಕಲ್ ರಿಕಾರ್ಡು ಇರಬೇಕು. ಇಲ್ಲದಿದ್ದರೆ ಒಳ್ಳೆಯ ಪರಿಣಾಮವಾಗುವುದಿಲ್ಲ.

If it is not favourable to the person concerned, it should be shown to him, his signature taken and he should have the right to comment in one sentence and afterwards to put up his grievances to the appropriate authority.

Mr. SPEAKER.—The Hon'ble member may kindly conculde now.

Sri V. M. DEO.—I am rather upset.

Mr. SPEAKER.—I do not want anything to be said by a member who is upset.

Sri V. M. DEO.—People said like that. If you ask me to shut up, I will shut up.

Mr. SPEAKER.—I have never used that word and I will never use it.

Sri V. M. DEO.—That is the way I felt. You did not use it. I will apologise and take it back. If people say that, if the people's voice should be throttled.....

Mr. SPEAKER.—Sri Deo has already said it three times, "historical record", "performance of the unit", etc .....

Sri V. M. DEO.—Sir, when you were practicing in the High Court of Madras, you had a roaring practice and you had once said before a Judge- My Lord, it is my misfortune to say the same thing" instead of saying, you have a bony head. So also, it is my misfortune to repeat things all over again.

Mr. SPEAKER.—It is for the members' information, I have never appeared in the Madras High Court.

† ಶ್ರೀ ಎಚ್. ಆರ್. ಕೇಶವ ಮೂರ್ತಿ (ಗಂಡಸಿ).—ಅಧ್ಯಕ್ಷರೇ, ಸ್ವಾಮಿ, ಈ ಪಬ್ಲಿಕ್ ಸರ್ವಿಸ್ ಕಮಿಷನ್ ಪ್ರಾರಂಭವಾದಾಗಿನಿಂದಲೂ ಇದರ ವರದಿಗಳನ್ನು ನಾವು ನೋಡಿದರೆ ಸರ ಕಾರಕ್ಕೂ ಸರ್ವಿಸ್ ಕಮಿಷನ್ನಿಗೂ ಇರತಕ್ಕ ಒಂದು ನಂಬಂದ ಹೇಗಿದೆ ಎಂಬುದು ವ್ಯಕ್ತಪಡುತ್ತದೆ. ಈ ವರದಿಗಳನ್ನು ಬರೆಯುವ ಧಾಟಿಯನ್ನು ನೋಡಿದರೆ, ಸರಕಾರದ ಮೇಲೆ ಆರೋಪಣೆ ಮಾಡುವ ಧಾಟಿಯಿಂದಲೇ ಬರೆಯುತ್ತಿದ್ದಾರೆಂಬುದು ವೇದ್ಯವಾಗುತ್ತದೆ. ಅವರು ರಾಜ್ಯಾಂಗದ ವಿಧಿಯ ಪ್ರಕಾರ ಒಂದು ವರ್ಷದ ಅವಧಿಯಲ್ಲಿ ಮಾಡಿದ ಕೆಲಸವೇನು, ಎಷ್ಟು ಸಾಧನೆಮಾಡಿದ್ದಾರೆ ಎನ್ನುವ ಬಗ್ಗೆ ನಿಜವಾದ ಚಿತ್ರವನ್ನು ಶಾಸನ ಸಭೆಯ ಮುಂದಿಡತಕ್ಕ ಪ್ರಯತ್ನ ಮಾಡಿಲ್ಲ. ಅದಕ್ಕೆ ಬದಲು ಸರಕಾರದ ತಪ್ಪನ್ನೇ ಎತ್ತಿ ತೋರಿಸಿ ಛೀಮಾರಿ ಹಾಕಿನುವ ಪ್ರಯತ್ನವನ್ನು ಮಾಡುತ್ತಿದ್ದಾರೆಂಬುದು ಚೆನ್ನಾಗಿ ವ್ಯಕ್ತವಾಗುತ್ತದೆ. ಇದನ್ನು ಸ್ವಲ್ಪ ಉತ್ಪ್ರೇಕ್ಷೆಯ ವರದಿ ಎಂದು ಭಾವಿಸಬಹುದು.

Mr. SPEAKER.—Why attribute motives ? The member may either criticse or support the report. In a debate attributing motives either to the Government or to the PSC does not enhance the basic merit of the argument.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ನಾನು ನತ್ಯಾಂಶವನ್ನು ಹೇಳುತ್ತಿದ್ದೇನೆ. ಆದುದರಿಂದ ನಾನು ಹೇಳುವುದೇನೆಂದರೆ, ಮುಂದಾದರೂ ಪಬ್ಲಿಕ್‌ಸರ್ವಿಸ್ ಕಮಿಷನ್ನಿನವರು ಈ ರೀತಿ ಉತ್ಪ್ರೇಕ್ಷೆಯಿಂದ ಕೂಡಿರುವ ವರದಿಯನ್ನು ತಯಾರು ಮಾಡದೆ ಮೂಲ ವಿಷಯಗಳನ್ನೂ ಅವರು ಮಾಡಿರತಕ್ಕ ಕೆಲಸವೇನು, ಸರಕಾರದವರು ತಪ್ಪು ಮಾಡಿದರೆ ಅದನ್ನು ತೋರಿಸಿ ಮುಂದೆ ತಪ್ಪನ್ನು ತಿದ್ದಿಕೊಳ್ಳುವ ಮಾರ್ಗವನ್ನು ತೋರಿಸಿದರೆ ಅದು ಸರಿಯಾದ ಮಾರ್ಗವೆಂದು ನನ್ನ ಭಾವನೆ. ಈ ಪಬ್ಲಿಕ್ ಸರ್ವಿಸ್ ಕಮಿಷನ್ ಮಾಡಿರತಕ್ಕ ಕೆಲಸವನ್ನು ನೋಡಿದರೆ, ಮೊದಲದ್ದ ಕೆಲಸಕ್ಕೂ ಈಗಿನ ಕೆಲಸಕ್ಕೂ ಹೋಲಿಸಿದರೆ ಮೂರನೆಯ ಒಂದು ಭಾಗಕ್ಕಿಳಿದಿದೆ. ಆದರೆ ಇದರ ಮೇಲಾಗುವ ಖರ್ಚನ್ನು ನೋಡಿದರೆ ಹೆಚ್ಚಾಗುತ್ತಿದೆ.

Mr. SPEAKER.—It can be dealt with when moneys are asked for the P. S. C. during the Budget discussion. Let us deal with the contents of the Report; that the Report points out non-fulfilment of certain conditions, etc.

Sri H. R. KESHAVA MURTHY.—I am coming to a salient point from this point. Therefore, I am forced to state that point.

ಆದುದರಿಂದ ಇಷ್ಟು ಜಾಸ್ತಿ ಖರ್ಚುಮಾಡಿ ಕೆಲಸವಿಲ್ಲದೆ ಬಿಡುವುದಕ್ಕೆ ನಮಗೆ ಇಷ್ಟವಿಲ್ಲ. ಐದು ಜನ ಕಮಿಷನ್ನಿನ ಸದಸ್ಯರಿದ್ದಾರೆ, ಸಿಬ್ಬಂದಿ ಬೇಕಾದಷ್ಟಿದೆ, ಹೀಗಿದ್ದರೂ ಕೂಡ ಡಿವಿಜನಲ್ ರೆವೆನ್ಯೂ ಮತ್ತು ಸ್ಟೇಟ್ ರೆವೆನ್ಯೂ ರಿಕ್ರೂಟ್‌ಮೆಂಟ್ ಕಮಿಟಿಗಳಿಗೆನ್ನೇಕೆ ಮಾಡಬೇಕು ? ನೌಕರಿಗಳಿಗೆ ನೇಮಕಗಳು, ವರ್ಗಗಳು ಮುಂತಾದ ಕೆಲಸಗಳನ್ನು ಅವರಿಗೇ ಬಿಟ್ಟುಕೊಟ್ಟು ಆ ಕೆಲಸಗಳನ್ನು ಅವರೇ ನಡೆಸಲು ಬಿಡಬೇಕು. ಹಾಗೆ ಮಾಡಿದರೆ ವಿವಿಧ ಇಲಾಖೆಗಳಿಗೆ ಸಕಾಲದಲ್ಲಿ ಕೆಲಸಕ್ಕೆ ಸಿಬ್ಬಂದಿ ಇಲ್ಲದಿದ್ದರೆ ತಪ್ಪನ್ನು ಅವರ ಮೇಲೆ ಹಾಕಬಹುದು. ಕಮಿಷನ್ನಿಗೇ ಅಧಿಕಾರವನ್ನು ಪೂರ್ಣವಾಗಿ ವಹಿಸಿದರೆ ಏನಾಗುತ್ತದೆ ? ಮೂರನೆ ದರ್ಜೆಯ ನೌಕರಿಗಳಿಗೆ ನೇಮಕ ಮಾಡುವುದು ಮುಂತಾದ ಹವ್ಯಾಸಗಳನ್ನು ಸರಕಾರವೇ ಇಟ್ಟುಕೊಂಡು ಜನರ ಕೈಲಿ ಹಾಗೂ ನಮ್ಮಲ್ಲಿ ಏಕೆ ಬೈಸಿಕೊಳ್ಳಬೇಕು ! ಈ ನೇಮಕಗಳನ್ನೂ ಅವರೇ ಮಾಡಲಿ. ಅವರು ಈ ಕಾರ್ಯವನ್ನು ಸರಿಯಾಗಿ ನಿರ್ವಹಿಸದೇ ಹೋದರೆ ಅದನ್ನು ಸರಕಾರ ಹೇಳಲಿ. ಪೋಲೀಸ್ ಸಬ್-ಇನ್‌ಸ್ಪೆಕ್ಟರುಗಳು, ಜೂನಿಯರ್ ಇಂಜಿನಿಯರುಗಳು ಮುಂತಾದ ಹುದ್ದೆಗಳನ್ನು ಮತ್ತು ಇತರ ಕೆಲವು ಕೆಲಸಗಳನ್ನು ತಮ್ಮ ಬಂಧುಗಳಿಗೂ ವಿಶ್ವಾಸಿಗರಿಗೂ ಕೊಟ್ಟು ಸಹಾಯ ಮಾಡಿ ಚುನಾವಣೆಗಳಲ್ಲಿ ಬೆಂಬಲ ಪಡೆದು ಸಾರೋದ್ಧಾರವಾಗಿ, ಶಾಶ್ವತವಾಗಿ ಸ್ಥಾನಗಳನ್ನು ಗಳಿಸಿಕೊಂಡು ರಾಜ್ಯವನ್ನಾಳಬೇಕೆಂಬ ಉದ್ದೇಶದಿಂದ ಹೀಗೆ ಮಾಡಿದ್ದಾರೆ ಮತ್ತು ತಮ್ಮ ಬೆಂಬಲಿಗರಾದ ವ್ಯಕ್ತಿಗಳನ್ನು ಇಟ್ಟುಕೊಳ್ಳಲು ಕಮಿಷನ್ನಿನಲ್ಲಿ ಹೆಚ್ಚು ಸ್ಥಾನಗಳನ್ನಿಟ್ಟುಕೊಂಡಿದ್ದಾರೆ ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಇಂತಹ ದೂರಿನಿಂದ ದೂರವಾಗಿರಬೇಕಾದರೆ ನಾನು ಹೇಳಿದ ನಲಹೆಯಂತೆ ಮಾಡಬೇಕು. ತಾವು ಮಾಡಿದ ಕಾನೂನನ್ನು ತಾವೇ ಮುರಿಯುತ್ತಿದ್ದಾರೆ ಎಂದು ಈ ಪಬ್ಲಿಕ್ ಸರ್ವಿಸ್ ಕಮಿಷನ್ ರಿಪೋರ್ಟು ನೋಡಿದರೆ ಗೊತ್ತಾಗುತ್ತದೆ. ಅಸಿಸ್ಟೆಂಟ್ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ನೇಮಕ ವಿಷಯದಲ್ಲಿ ಶೇಕಡ 25 ರಷ್ಟು ಪ್ರಮೋಷನ್ ಕೊಟ್ಟು ನೇಮಕ ಮಾಡಬೇಕು ಮತ್ತು ಉಳಿದದ್ದರಲ್ಲಿ ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡಬೇಕು ಎಂದು ರೂಲ್ಸು ಮಾಡಿದ್ದಾರೆ ಎಂದು ವರದಿಯಲ್ಲಿ ಹೇಳಿದ್ದಾರೆ. ಆದರೆ ಈ ವಿಚಾರದಲ್ಲಿ ತಾವೇ ಮಾಡಿದ ಕಾನೂನನ್ನು ಮುರಿದು ಬಿಟ್ಟು ಮನಸ್ಸಿಗೆ ಬಂದಂತೆ ನೇಮಕ ಮಾಡಿದ್ದಾರೆ. ವರದಿಯ 12ನೇ ಪುಟದಲ್ಲಿ ಈ ರೀತಿ ಇದೆ :—

> "It is indeed surprising that even after the promulgation of Cadre and recruitment rules and clear advice from the Commission Government not only took no action but continued to order promotions in utter disregard of these rules on the vague assurance that all the promotions could be reviewed in the light of the views furnished by the Commission."

ಈ ರೀತಿ ರೂಲ್ಸ್ ವಾಯಲೇಟ್ ಮಾಡಿ ಮನಸ್ಸಿಗೆ ಬಂದಂತೆ ಸ್ವೇಚ್ಛೆಯಾಗಿ ನೇಮಕ ಮಾಡುತ್ತಿದ್ದಾರೆ.

Law makers should not be law breakers; there will be no sanctity for laws.

ಕನ್ನಡದಲ್ಲಿ ಒಂದು ಗಾದೆ ಇದೆ. ಹಾವು ಮೊಟ್ಟೆ ಇಡುತ್ತದೆ. ತಾನು ಇಟ್ಟ ಮೊಟ್ಟೆಗಳನ್ನು ತಾನೇ ತಿಂದು ಬಿಡುತ್ತದೆ. ಈ ರೀತಿ ಮಾಡುವುದು ಸರಿಯಲ್ಲ. ತಾನು ಮಾಡಿದ ಕಾನೂನನ್ನು ಸರಕಾರ ತಾನೆ ಮುರಿದರೆ ಅಂಥ ಕಾನೂನನ್ನು ಜನರು ಪಾಲಿಸಬೇಕು ಅಂದರೆ ಹೇಗೆ ? ಸರಕಾರ ತಾನು ಮಾಡಿದಕ್ಕಂಥ ಕಾನೂನನ್ನು ಮೊದಲು ತಾವು ಕಟ್ಟುನಿಟ್ಟಾಗಿ ಪಾಲಿಸಬೇಕು. ಅಂದರೆ ಜನರೂ ಕೂಡ ಅಂಥ ಕಾನೂನನ್ನು ಪಾಲಿಸುತ್ತಾರೆ. ಸರಕಾರಕ್ಕೂ ಕಾನೂನಿಗೂ ಜನ ಹೆದರುತ್ತಾರೆ. ಆದುದರಿಂದ ಸರಕಾರ ಕಾನೂನು ಮುರಿಯಲು ಪ್ರಯತ್ನ ಮಾಡಬಾರದು ಅಲ್ಲದೆ ಕಟ್ಟುನಿಟ್ಟಾಗಿ ಪರಿಪಾಲಿಸಬೇಕು ಎಂದು ಹೇಳುತ್ತೇನೆ.

ಇನ್ನು ಪೋಲೀಸ್ ಸಬ್‌ಇನ್‌ಸ್ಪೆಕ್ಟರ್ ರಿಕ್ರೂಟ್‌ಮೆಂಟ್ ಪೂರ್ತಿ ಜವಾಬ್ದಾರಿಯನ್ನು ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ವಹಿಸಿಕೊಡಬೇಕೆಂದು ಹೇಳುತ್ತೇನೆ. ಕೆಲಸ ಕೊಡತಕ್ಕಂಥ ಈ ಜವಾಬ್ದಾರಿ ಸರಕಾರ ಏತಕ್ಕೆ ಇಟ್ಟುಕೊಳ್ಳಬೇಕು ? ಸರಕಾರದ ಅಧಿಕಾರ ಸ್ಥಾನದಲ್ಲಿ ಇರುವವರು ತಮಗೆ ಬೇಕಾದವರಿಗೆ ತಮ್ಮ ಚೇರಾಗಳಿಗೆ ಕೆಲಸ ಕೊಡಬಹುದು. ಇದರಿಂದ ಆಕ್ಷೇಪಣೆ ಬರುತ್ತದೆ. ಇದಲ್ಲದೇ ಒಂದು ವೇಳೆ ಕೆಲಸ ಕೊಟ್ಟರೂ ಕೂಡ ಅವರ ಜನ ಅವರ ಮೇರೆಯೇ ತಿರುಗಿ ಬೀಳುತ್ತಾರೆ ಹಾಗೂ ತೊಂದರೆಯುಂಟಾಗುತ್ತದೆ. ಆದುದರಿಂದ ಎಲ್ಲಾ ರಿಕ್ರೂಟ್‌ಮೆಂಟಿನ ಜವಾಬ್ದಾರಿಯನ್ನು ಪಬ್ಲಿಕ್ ಸರ್ವಿಸ್ ಕಮಿಷನ್ ಅವರಿಗೆ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಪಬ್ಲಿಕ್ ಸರ್ವಿಸ್ ಕಮಿಷನ್ ರಿಪೋರ್ಟಿನಲ್ಲಿ ಎತ್ತಿದ ಆಕ್ಷೇಪಣೆಗಳಿಗೆ ಸಮಂಜಸ ಉತ್ತರ ಕೊಟ್ಟಿಲ್ಲ. ಹದಿನಾಲ್ಕನೇ ಪಾಯಿಂಟ್‌ವರೆಗೆ ಮಾತ್ರ ಉತ್ತರ ಕೊಟ್ಟಿದೆ ಮುಂದಿನ ಪಾಯಿಂಟ್ಸುಗಳಿಗೆ ಉತ್ತರ ಕೊಟ್ಟಿಲ್ಲ. ಉತ್ತರ ಕೊಡದೇ ಇರುವುದಕ್ಕೆ ಕಾರಣವೇನು ? ಉತ್ತರವಿಲ್ಲದೆ ನಾವು ಏನು ಮಾಡಬೇಕು ? ಪೂರ್ತಿ ಉತ್ತರ ಕೊಡುವವರೆಗೆ ಈ ಚರ್ಚೆ ನಿಲ್ಲಿಸಬೇಕು ಎಂದು ಹೇಳುತ್ತೇನೆ. ಇದಕ್ಕೆ ಸರಕಾರ ಏನು ಉತ್ತರ ಹೇಳುತ್ತದೆ ಎಂದು ಕೇಳುತ್ತೇನೆ. ಅನೇಕ ವಿಷಯಗಳಲ್ಲಿ ಸರಕ್ಷಾರ ಪಿ ಎಸ್. ಸಿ. ಕನ್ಸಲ್ಟ್ ಮಾಡಿಲ್ಲ. ನಾನು ಒಂದು ಸಲಹೆ ಮಾಡುತ್ತೇನೆ. ಪ್ರೊಮೋಷನ್ ನೀತಿಕ ವಿಚಾರದಲ್ಲಿ ಒಂದು ಆಕ್ಟ್ ಪಾಸು ಮಾಡಬೇಕು. ಅಂಥ ಆಕ್ಟಿಗೆ ಅನುಸಾರವಾಗಿ ನೀತಿಕ ಪ್ರಮೋಷನ್ ಮಾಡಬೇಕು. ಇಂಥ ಒಂದು ಆಕ್ಟನ್ನು ಸರಕಾರ ಶೀಘ್ರದಲ್ಲಿ ಪಾಡುತ್ತಾರೆಂದು ನಾನು ಭಾವಿಸುತ್ತೇನೆ. ಇದಲ್ಲದೆ ಜನರ ತಿಳುವಳಿಕೆಗಾಗಿ ಒಂದು ಪುಸ್ತಕ ರೂಪದಲ್ಲಿ ಜನರಿಗೆ ಈ ಕಾನೂನನ್ನು ಹಂಚಬೇಕು. ಇದು ಸರಕಾರದ ಕರ್ತವ್ಯ ಎಂದು ನಾನು ಭಾವಿಸುತ್ತೇನೆ.

ಒಟ್ಟಿನಲ್ಲಿ ನಾನು ಹೇಳುವುದು ಇಷ್ಟೇ. ಪಬ್ಲಿಕ್ ಸರ್ವಿಸ್ ಕಮಿಷನ್ನಿಗೂ ಸರಕಾರಕ್ಕೂ ತಿಕ್ಕಾಟ ಅನೂಚಾನವಾಗಿ ನಡೆದಿದೆ. ಈ ತಿಕ್ಕಾಟ ಒಂದು ತಮಾಷೆಯಾಗಿ ಕಾಣುತ್ತಿದೆ. ಇದಕ್ಕೊಂದು ಪರಿಹಾರ ಮಾರ್ಗ ಕಂಡು ಹಿಡಿಯಬೇಕು. ಏನಾದರೂ ಭಿನ್ನಾಭಿಪ್ರಾಯ ಬಂದರೆ ಏನು ಮಾಡಬೇಕು ಹೇಗೆ ಬಗೆಹರಿಸಬೇಕು ಎಂದರೆ ಅಡ್ವೋಕೇಟ್ ಜನರಲ್ ಅಂಥವರ ಸಲಹೆ ತೆಗೆದುಕೊಳ್ಳಬೇಕು. ಈ ರೀತಿ ಒಂದು ಕಾನೂನು ಮಾಡುವುದು ಯೋಗ್ಯ ಹಾಗು ಆ ರೀತಿ ಮಾಡುತ್ತೀರಿ ಎಂದು ಭಾವಿಸುತ್ತೇನೆ. ಒಟ್ಟಿನಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ ಕಾರ್ಯ ಗುರುತರವಾದುದು. ದಾರಿ ಬಿಟ್ಟು ಹೋಗುವುದು ನ್ಯಾಯವಲ್ಲ. ನ್ಯಾಯವಾದ ರೀತಿಯಲ್ಲಿ ಕೆಲಸ ಕಾರ್ಯಗಳು ನಡೆಯಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Before I call upon anybody, I believe only three hours are left over out of 5 hours allotted. It is better I extend the time limit upto 6 o'clock. The debate will continue upto 5 p. m. and the Hon'ble Minister will reply thereafter.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ಈ ಸಭೆಯಲ್ಲಿ ಮೈಸೂರು ಪಬ್ಲಿಕ್ ಸರ್ವಿಸ್ ಕಮಿಷನ್ ವರದಿಯ ಮೇಲೆ ಚರ್ಚೆಯಾಗುತ್ತಾ ಇದೆ. ಪ್ರತಿ ವರ್ಷ ಪಬ್ಲಿಕ್ ಸರ್ವಿಸ್ ಕಮಿಷನ್ ಏನು ಕೆಲಸ ಮಾಡಿದೆ ಸರಕಾರಕ್ಕೂ ಅದಕ್ಕೂ ಎಷ್ಟರಮಟ್ಟಿಗೆ ಭಾಂಧವ್ಯ ಇದೆ ಎಂಬುದನ್ನು ಈ ಸಭೆ ಚರ್ಚೆ ಮಾಡಿ ಅತ್ಯಮೂಲ್ಯವಾದ ಸಲಹೆ ಈ ಸಭೆ ಕೊಟ್ಟಿದೆ. ಸರಕಾರ ಅವನ್ನು ಎಷ್ಟರ ಮಟ್ಟಿಗೆ ಗ್ರಹಿಸುತ್ತದೆಯೋ ನನಗೆ ತಿಳಿಯದು. ಹೋದ ಸಲ ಈ ರಿಪೋರ್ಟ್ ಮೇಲೆ ಚರ್ಚೆ ನಡೆದಾಗ್ಗೆ ಸಂಧಿಗ್ಧ ಪರಿಸ್ಥಿತಿ ಉಂಟಾಗಿ ನಾವು ಸಭೆಯಿಂದ ಹೊರಗೆ ಹೋದ ಒಂದು ನಿಮಿಷದಲ್ಲಿ ಈ ರಿಪೋರ್ಟ್ ಅಂಗೀಕಾರವಾಯಿತು. ಇದನ್ನು ಅಂಗೀಕಾರ ಮಾಡುವುದಕ್ಕೆ ಅಧ್ಯಕ್ಷರು ಅನುಕೂಲ ಮಾಡಿಕೊಟ್ಟರು. ಈ ವಿಷಯ ಹೇಳುವುದರಲ್ಲಿ ತಪ್ಪಾಗುವುದಿಲ್ಲ ಎಂದು ನನಗೆ ಅನಿಸುತ್ತದೆ.

Mr. SPEAKER.—Please don't misquote. Yesterday somebody wanted to know what it contained. I said that reports had been distributed and that they could refer to it.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ...ಇದನ್ನು ಏತಕ್ಕೆ ಹೇಳಿದೆ ಎಂದರೆ ಸ್ಟೇಟ್ಸ್ ರೀಆರ್ಗನೈಜೇಷನ್ ಆಗುವ ಮುಂಚೆ ಆಯಾಯ ರಾಜ್ಯದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ ಇತ್ತು. ಸ್ಟೇಟ್ಸ್ ರೀಆರ್ಗನೈಜೇಷನ್ ಆದ ಮೇಲೆ ಈ ಹೊಸ ರಾಜ್ಯದಲ್ಲಿ ಒಂದು ಪಬ್ಲಿಕ್ ಸರ್ವಿಸ್ ಕಮಿಷನ್ ಇರಬೇಕು ಎಂದು ನಿರ್ಣಯವಾಯಿತು. ಅದಕ್ಕೆ ಅನುಸಾರವಾಗಿ ಈ ಕಮಿಷನ್ ಸದಸ್ಯರ ಸಂಖ್ಯೆ ದೊಡ್ಡದಾಯಿತು. ಕಾನ್‌ಸ್ಟಿಟ್ಯೂಷನ್ ಪ್ರೊವಿಜನ್‌ಕ್ಕೆ ಅನುಸಾರವಾಗಿ ಈ ಸೇವಾ ಆಯೋಗ ಇರಬೇಕೆಂದು ಮೂರು ಜನ ಸದಸ್ಯರುಳ್ಳ ಈ ಆಯೋಗ ಮಾಡಿದರು.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

4-30 P.M.

ಈ ದೇಶ ವಿಶಾಲವಾದ ಮೇಲೆ, ಅದು ಇಲ್ಲಿಂದ ಬೆಳಗಾಂ ತಟಾದು ಹೋದ ಮೇಲೆ, 5 ಜನ ಆದರು. ಹರಿಜನರಿಗೆ ಪ್ರಾತಿನಿಧ್ಯ ಬೇಕು, ಮೈನಾರ್ ಕಮ್ಯೂನಿಟಿಗೆ ಪ್ರಾತಿನಿಧ್ಯ ಬೇಕು ಅಂತ ಸರಕಾರ ಈ ಸಭೆಯಲ್ಲಿ ಬಂದಂಥ ಚರ್ಚೆಗೆ ಕೊಟ್ಟ ಉತ್ತರಕ್ಕೆ ಅನುಗುಣವಾಗಿ, ಈ ಆಯೋಗದ ಸಂಖ್ಯೆಯನ್ನು ಐದು ಜನಕ್ಕೆ ಏರಿಸಿತು. ಐದು ಜನಕ್ಕೆ ಇಂಕ್ರೀಸ್ ಮಾಡುವಾಗ, ಇನ್ನೆರಡು ಜನ ಗಳನ್ನು ಅದಕ್ಕೆ ಸೇರಿಸುವಾಗ ಸರಕಾರ ಈ ಸಭೆಗೆ ಕೊಟ್ಟ ಒಂದೆರಡು ಮಾತುಗಳನ್ನು ಸಭೆಯ ಗಮನಕ್ಕೆ ಈಗ ತರ ಬಯಸುತ್ತೇನೆ. ಅವತ್ತು ಇರತಕ್ಕಂಥ ಸದಸ್ಯರು ಕೆಲಸ ಮಾಡುವುದ ಕ್ಕಾಗುವುದಿಲ್ಲವೇ, ಇನ್ನೆರಡು ಜನರನ್ನು ಏಕೆ ಹೆಚ್ಚಾಗಿ ಸೇರಿಸಬೇಕು ಎಂದು ಕೇಳಿದಾಗ, ಸರಕಾರ ಇನ್ನು ಮುಂದೆ ಯಾವ ನೇಮಕವನ್ನೂ ನೇರವಾಗಿ ಮಾಡುವುದಿಲ್ಲ, ಸರಕಾರದವರು ಅಪಾಯಿಂಟ್ ಮೆಂಟಿನ ಯಾವ ವಿಷಯದಲ್ಲಿಯೂ ಬಾಯಿ ಹಾಕುವುದಿಲ್ಲ. ಎಲ್ಲಾ ಸರ್ವಿಸ್ ಕಮಿಷನ್‌ಗೇ ಕಳು ಹಿಸಿ ಕೊಡುತ್ತೇವೆಂದು ಹೇಳಿದರು. ಆದರೆ ಈ ರಿಪೋರ್ಟು ನೋಡುವಾಗ, ಸರ್ಕಾರ ಅನೇಕ ಕಡೆ ತಾನೇ ನೇಮಕ ಮಾಡಿದಂಥ ಅನೇಕ ಸಂದರ್ಭಗಳು ಈ ರಿಪೋರ್ಟಿನಲ್ಲಿ ಕಂಡು ಬಂದಿವೆ. ಜಾಸ್ತಿ ಸದಸ್ಯರು ಈ ಆ ಯೋಗಕ್ಕೆ ಆದ ಮೇಲೆ, ಸರ್ವಿಸು ಕಮಿಷನ್ನನ್ನು ಕೇಳದೆ ಸರ್ಕಾರ ನೇಮಕ ಮಾಡಿದ ಎಷ್ಟೋ ನಿದರ್ಶನಗಳು ಅವರ ವರದಿಯಲ್ಲಿ ಅಡಕವಾಗಿವೆ.

ಈ ರಾಜ್ಯದಲ್ಲಿ ಇವತ್ತಿನ ದಿವಸ ಒಂದು ಡಿವಿಜನರ್ ರಿಕ್ರೂಟ್‌ಮೆಂಟ್ ಕಮಿಟಿ, ಒಂದು ಸ್ಟೇಟ್ ಲೆವಲ್ ರಿಕ್ರೂಟ್‌ಮೆಂಟ್ ಕಮಿಟಿ ಒಂದು ಪಬ್ಲಿಕ್ ಸರ್ವಿಸ್ ಕಮಿಷನ್, ಒಂದು ಯೂನಿಟ್ ಆಫೀಸು—ಹೀಗೆ 4 ಜನ ಕೆಲಸವನ್ನು ಕೂಡತಕ್ಕಂಥ ಅಧಿಕಾರ ಹೊಂದಿದ್ದಾರೆ. ಯೂನಿಟ್ ಆಫೀಸರಿಗೆ ಅವರ ಯೂನಿಟ್ಟಿಗೆಳಗೆ ನಾಲ್ಕನೆ ವರ್ಗದ ಜವಾನರನ್ನೂ 2ನೇ ವರ್ಗದ ನಾಕರರನ್ನು ನೇಮಕ ಮಾಡುವ ಅಧಿಕಾರವಿದೆ. ಡಿವಿಜಿ ರಿಕ್ರೂಟ್‌ಮೆಂಟ್ ಕಮಿಟಿಗೆ ಕಾಂಪೌಂಡರುಗಳು, ಗ್ರಾಮ ಸೇವಕರು, ಸ್ಕೂಲು ಟೀಚರುಗಳು, ಸೆಕೆಂಡ್ ಮತ್ತು ಡಿವಿಜನ್ ಕ್ಲಾರ್ಕುಗಳು, ಮತ್ತಿತರ ನಾನ್ ಗೆಜೆಟೆಡ್ ಆಫೀಸರುಗಳನ್ನು ನೇಮಕ ಮಾಡತಕ್ಕಂಥ ಅಧಿಕಾರವಿದೆ. ಸ್ಟೇಟ್‌ಲೆವಲ್ ರಿಕ್ರೂಟ್ ಕಮಿಟಿಯವರು ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್‌ಗಳಿಗೆ ಬೇಕಾದ ಸ್ಟಾಕ್ ಮೆನ್, ಸೆರಿಕಲ್ಚರಿಸ್ಟ್ ಮುಂತಾದುವರನ್ನು ನೇಮಕ ಮಾಡತಕ್ಕಂಥ ಅಧಿಕಾರವನ್ನು ಹೊಂದಿವ್ವಾರೆ.

ಇನ್ನು ಸರ್ವಿಸು ಕಮಿಷನ್ನಿಗೆ ಉಳಿದಿರುವ ಕೆಲಸ ಎಷ್ಟು ಸ್ವಲ್ಪ ಅವರಿಗೆ ಉಳಿದಿರ ತಕ್ಕಂಥಾದು First and Second class Officers ಮಾತ್ರ, ಅಂದರೆ ಅಸಿಸ್ಟೆಂಟು ಕಮಿಷನರುಗಳು; ತಹ ಸೀಲ್‌ದಾರರು, ಬಿ.ಡಿ.ಓ.ಗಳು ಮುನ್‌ಸೀಫರು ಇವರುಗಳನ್ನು ನೇಮಕ ಮಾಡತಕ್ಕಂಥ ಅಧಿಕಾರ ಮಾತ್ರ ಕಮಿಷನ್ನಿಗಿದೆ. ಒಂದು ವರ್ಷಕ್ಕೆ ಅಥವಾ ಐದು ವರ್ಷಕ್ಕೇ ಮೈಸೂರು ಸರಕಾರದಲ್ಲಿ ಎಷ್ಟು ಜನ ಅಸಿಸ್ಟೆಂಟ್ ಕಮಿಷನರುಗಳನ್ನು ನೇಮಕ ಮಾಡುತ್ತಾರೆ, ಎಷ್ಟು ಜನ ತಹಸೀಲು ದಾರರುಗಳನ್ನು ನೇಮಕ ಮಾಡುತ್ತಾರೆ. ಒಂದು ಮತ್ತು ಎರಡನೆ ವರ್ಗದ ಅಧಿಕಾರಿಗಳನ್ನೇ ಆಯೋಗ ನೇಮಕ ಮಾಡುವುದಾದರ, ಅವರಿಗಿರತಕ್ಕಂಥ ವಾಲ್ಯೂಮ್ ಆಫ್ ವರ್ಕ್ ಎಷ್ಟು? ರಿಕ್ರೂಟ್‌ಮೆಂಟಿಗೋಸ್ಕರವಾಗಿಯೇ ನಾಲ್ಕು ಅಂಶಗಳನ್ನು ಇಟ್ಟುಕೊಂಡೂ, ನಾಳೆ ಬೆಳಿಗ್ಗೆ ಶೇಕ್ ದಾರ್ ಮತ್ತು ಶಿರಸ್ತೆದಾರರ ಸೀನಿಯಾರಿಟಿ ಇತ್ಯರ್ಥ ಮಾಡತಕ್ಕಂಥ ಪ್ರಶ್ನೆ ಬಂದರೆ, ಅದನ್ನು ಮಾಡ ತಕ್ಕಂಥವರು ಯೂನಿಟ್ ಆಫೀಸರಲ್ಲಿ, ಅದನ್ನು ಡಿಸ್ಪೈಡ್ ಮಾಡತಕ್ಕದು ಪಬ್ಲಿಕ್ ಸರ್ವಿಸ್ ಕಮಿ ಷನಲ್ಲಿ ಸರಕಾರಕ್ಕೆ ಇವತ್ತು ಯಾರಾದರೂ ಅಧಿಕಾರಿ ಅಪೀಲು ಹಾಕಿದರೆ. ಆ ಅಪೀಲು ಅರ್ಜಿ ಯನ್ನು ಪಬ್ಲಿಕ್ ಸರ್ವಿಸು ಕಳುಹಿಸಿ, ಆ ಅಪಾಯಿಂಟ್‌ಮೆಂಟ್ ಸರಿಯಾಗಿ ಮಾಡಿದ್ದಾರೆಯೆ, ಪ್ರಮೋಷನ್ ಕೊಡುವಾಗ ಸೀನಿಯಾರಿಟಿ ಅಬ್‌ಸರ್ವ್ ಮಾಡಿದ್ದಾರೆಯೇ, ರೂಲ್ಸ್ ಪ್ರಿಸ್ಕ್ರಿಪರ್ ಅಡಾಪ್ಟ್ ಮಾಡಿದ್ದಾರೆಯೇ ಎಂದು ನೋಡಿಸುತ್ತಾರೆ. ಅಪಾಯಿಂಟ್ ಯೂನಿಟ್ ಆಫೀಸರು ಮಾಡಿದರೆ, ನೇಮಕವಾದವನ ಜಾತಕಫಲ ಸರಿಯಾಗಿದೆ ಎಂದು ಸರ್ಟಿಫಿಕೇಟ್ ಕೊಡುವವರು ಪಬ್ಲಿಕ್ ಸರ್ವಿಸ್ ಕಮಿಷನ್, ಇವತ್ತು ಸ್ಟೇಟ್ ಲೆವರ್ ರಿಕ್ರೂಟ್‌ಮೆಂಟ್ ಕಮಿಟಿಯ ಸ್ಥಿತಿಯೂ ಅಷ್ಟೆ. ಈಗ ಅಪಾಯಿಂಟ್‌ಮೆಂಟ್, ಪ್ರಮೋಷನ್, ಸೀನಿಯಾರಿಟಿ ಕುರಿತು ಸರ್ಕಾರದ ಮುಂದೆ ಹಾಕಿದ ಅಪೀಲುಗಳನ್ನು, ಅವಕ್ಕೆ ಸಂಬಂಧಪಟ್ಟ ಎಷ್ಟು ಕಾಗದಗಳನ್ನು ಸರ್ವಿಸ್ ಕಮಿಷನ್ನಿಗೆ ಕಳುಹಿಸುತ್ತಾ ಇದ್ದಾರೆ. ಈಗ ಶ್ರೀ ಹೆಗ್ಗಡೆಯವರು ಸರ್ವಿಸ್ ಕಮಿಷನ್ನು ಒಂದು ಇರಬೇಕೆಂದು ರಾಜ್ಯಾಂಗದಲ್ಲಿವೆ, ಅದರ ಪ್ರಕಾರ ಒಂದು ಇಲ್ಲಿಯೂ ಇರುತ್ತದೆಂದು ಹೇಳಿದರು. ಕಮಿಷನ್ನು ಹೇಳಿದ್ದನ್ನು ಸರ್ಕಾರ ಒಪ್ಪಬಹುದು, ಬಿಡಬಹುದು, ಅವರ ಶಿಫಾರಸು ಕಂಪಲ್ಸರಿಯಲ್ಲ ಅದು ಕಟ್ಟುನಿಟ್ಟಿಲ್ಲವೆಂದು ಹೇಳಿದರು. ಅದಕ್ಕೋಸ್ಕರ ಬೇಕಾದರೆ ಸರಕಾರ ತನಗೆ ಬೇಕಾದ್ದನ್ನು ಒಪ್ಪ

ಬಹುದು, ತನಗೆ ಬೇಡವಾದ್ದನ್ನು ತಿರಸ್ಕರಿಸಬಹುದು ಎಂದು ಹೇಳಿದರು. ರಾಜ್ಯ ವಿಶಾಲವಾದ ಮೇರೆ, ಬೆಂಗಳೂರಿಗೆ ಪ್ರಯಾಣ ಮಾಡಿ ಬರಲು ಅಭ್ಯರ್ಥಿಗಳಿಗೆ ಬೆಂಗಳೂರು ದೂರ, ಅವರಿಗೆ ಅನಾನುಕೂಲವಾಗುತ್ತದೆಂದು ಸ್ಟೇಟ್ ಲೆವಲ್ ರಿಕ್ರೂಟ್‌ಮೆಂಟ್ ಕಮಿಟಿ ಮತ್ತು ಆ ಯೋಗದವರು ರಾಜ್ಯದಲ್ಲಿ ಸುತ್ತಾಡಿಕೊಂಡು ಬಂದು ರಿಕ್ರೂಟ್‌ಮೆಂಟ್ ಕೆಲಸ ಮಾಡುತ್ತಾರೆ. ಇದರಲ್ಲಿ ಸ್ಟೇಟ್ ಲೆವಲ್ ಕಮಿಟಿಗೂ, ಸರ್ವಿಸು ಕಮಿಷನ್ನಿಗೂ ಕ್ಲಾಷ್ ಆಗುತ್ತಿಲ್ಲವೇ? ಪಬ್ಲಿಕ್ ಸರ್ವಿಸು ಕಮಿಷನ್ನು ಅಟಾನಮಸ್ ಬಾಡಿ ಅಂತ ರಾಜ್ಯಾಂಗದಲ್ಲಿ ಹೇಳಿದೆ. ರಾಜ್ಯಾಂಗದ ಪ್ರಕಾರ ಈ ಒಂದು ಆಯೋಗಕ್ಕೆ ಎಷ್ಟು ಬೆರೆ ಕೊಡಬೇಕೋ, ಯಾವ ಮಟ್ಟದಲ್ಲಿ ಅದರ ರೀತಿ ನೀತಿಗಳನ್ನು ವಿಮರ್ಶಿಸಬೇಕೋ, ಅದಕ್ಕೆ ಯಾವ ಸ್ಥಾನಮಾನವನ್ನು ಕೊಡಬೇಕೋ, ಅದನ್ನು ಕೊಟ್ಟಿಲ್ಲ. ಸರಕಾರ ಕಮಿಷನ್ನನ್ನು ಬದಿಗೊತ್ತಿ, ತಮಗೆ ಬೇಕಾದವರಿಗೆ ಕೆಲಸಗಳನ್ನು ಒದಗಿಸುವುದಕ್ಕೋಸ್ಕರವಾಗಿ, ಸರಕಾರ ಇವತ್ತು ಈ ಕಮಿಟಿಗಳನ್ನು ಮಾಡಿತು. ಒಂದು ಕಡೆಯಲ್ಲೇ ಗೊತ್ತಾಯಿತು. ಕರ್ಣಾಟಕ ಯೂನಿವರ್ಸಿಟಿಯಲ್ಲಿ ಕೆಲಸ ಮಾಡತಕ್ಕ ಸ್ಯಾಟಿಸ್ಟಿಕಲ್ ಪ್ರೊಫೆಸರು ಬೆಂಗಳೂರು ಡಿವಿಜನ್ನಿಗೆ ಹೋಗಿ ಅಲ್ಲಿ ಎಷ್ಟು ಜನ ರಿಕ್ರೂಟ್ ಮಾಡಿದ್ದಾರೆಂದು ಕೇಳಿದರು ಎಂದು ನನ್ನ ಕಿವಿಗೆ ಬಿತ್ತು. ಏತಕ್ಕೋಸ್ಕರ ಕೇಳಿದರೆಂದರೆ ಯಾವ ಯಾವ ಜಾತಿಯವರು ಯಾವ ಯಾವ ಡಿವಿಜನ್ನಿನಲ್ಲಿ ಯಾವ ಯಾವ ಮಟ್ಟದಲ್ಲಿ ಎಷ್ಟೆಷ್ಟಿದ್ದಾರೆಂದು ತಿಳಿದುಕೊಂಡು, ಕಡಿಮೆ ಇದೆಯೆಂದು ತೋರಿದ ಕಡೆ ಅಯಾ ಕೋಮಿನವರನ್ನು ಹೆಚ್ಚಾಗಿ ನೇಮಕ ಮಾಡಲು ಕರ್ಣಾಟಕ ಯೂನಿವರ್ಸಿಟಿಯೂ ಒಂದು ಪಬ್ಲಿಕ್ ಯೂನಿವರ್ಸಿಟಿ ಆದರೆ ಈ ತಾರತಮ್ಯ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಬಹುದು. ಎಲ್ಲ ಮುಖ ಇಟ್ಟರೂ, ಎಲ್ಲ ಮೂತಿ ಇಟ್ಟರೂ ಏನಾದರೂ ಒಂದು ದುರ್ವಾಸನೆ ಬರುತ್ತಾ ಇದೆ.

13 ಸಾವಿರ ಜನರಿಂದ ಬೆಂಗಳೂರು ಡಿವಿಜನ್ನಿನಲ್ಲಿ ಸೆಕೆಂಡ್ ಡಿವಿಜನ್ ಕ್ಲಾರ್ಕ್ಸ್ ನೇಮಕಕ್ಕೆ ಅರ್ಜಿಗಳು ಬಂದಿವೆ, ಅದರಲ್ಲಿ ಒಂದು ಸಾವಿರ ಜನರನ್ನು ಚುನಾವಣೆ ಮಾಡಬೇಕು. ಈ ರಿಕ್ರೂಟ್‌ಮೆಂಟ್ ಕೆಲಸದಿಂದ ಡಿವಿಜನಲ್ ಕಮಿಷನರಿಗೆ ಇನ್ನು ಯಾವ ಕೆಲಸ ಮಾಡುವುದಕ್ಕೂ ಅವರಿಗೆ ಕಾಲವಿಲ್ಲ. ಮಳೆ ಬೆಳೆ ಹೋಗಿಬಿಟ್ಟು ಅಭಾವ ಪರಿಸ್ಥಿತಿ ಬಂದು, ಜನರಲ್ಲಿ ಹಾಹಾಕಾರ, ಅನ್ನಕ್ಕೆ ಎದ್ದಿರುವ ದುಃಸ್ಥಿತಿ ಇರುವಾಗ, ಡಿವಿಜನಲ್ ಕಮಿಷನರಿಗೆ ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಸುತ್ತಾಡಿ ಪರಿಹಾರ ಕ್ರಮ ಕೈಗೊಳ್ಳಲು ಪುರಸತ್ತಿಲ್ಲ. ಅಭ್ಯರ್ಥಿಗಳ ಇಂಟರ್ವ್ಯೂ ಬೆಳಿಗ್ಗೆ 9½ ಗಂಟೆಗೆ ಪ್ರಾರಂಭವಾದರೆ, ಅದು ಅವತ್ತು ಮುಗಿಯುವುದು 6 ಗಂಟೆಗೆ. ಇದರಲ್ಲಿಯೇ ಅವರ ಕಾಲವೆಲ್ಲಾ ವಿನಿಯೋಗವಾಗಿ, ಡಿವಿಜನಲ್ ಕಮೀಷನರು ಅವರ ಲೆಜಿಟಿಮೇಟ್ ಮತ್ತು ರೊಟೀನ್ ಕೆಲಸ ನೋಡುವುದಕ್ಕೇ ಆಗುವುದಿಲ್ಲ: ಆದರೆ ಇವತ್ತು ಪಬ್ಲಿಕ್ ಸರ್ವಿಸ್ ಕಮಿಷನ್ ಸದಸ್ಯರು ಏನು ಮಾಡುತ್ತಿದ್ದಾರೆ? ಅವರ ಮೇಲೆ ಅಕ್ಯುಸೇಷನ್ ಮಾಡುತ್ತಾ ಇಲ್ಲ. ಆಫೀಸಿಗೆ ಹೋಗುತ್ತಾರೆ, ಮೂರು ಗಂಟೆಗೆ ಮನೆಗೆ ಹಿಂತಿರುಗುತ್ತಾರೆ! ಅವರ ಹತ್ತಿರ ಕೆಲಸವಿಲ್ಲ. ಅವರ volume of work, reduce ಆಗಿದೆ. ಅವರು ಆಫೀಸಿನಲ್ಲಿ ಕೂತುಕೊಂಡು ಏನು ಮಾಡುತ್ತಾರೆ? ಅದಕ್ಕೋಸ್ಕರ, ಮೈನೂರು ಸರ್ಕಾರ ಈ ಎಲ್ಲಾ ಕಮಿಟಿಗಳನ್ನು ಮಾಡುವುದರ ಬದಲು ಕಾನ್‌ಸ್ಟಿಟ್ಯೂಷನ್ನಿಗೆ ಗೌರವ ಕೊಟ್ಟು ಕಮಿಷನ್ನಿಗೆ ಹೆಚ್ಚಿಗೆ ಕೆಲಸ ಒದಗಿಸಿ; ಇಲ್ಲದಿದ್ದರೆ ಅದನ್ನು ಇಟ್ಟುಕೊಂಡಿರುವ ಬದಲು, ಸರ್ವಿಸ್ ಕಮಿಷನ್ ತೆಗೆದು ಹಾಕಿಬಿಡಿ, ಸರ್ವೀಸ್ ಕಮಿಷನರ್ ಅಂತ ಒಬ್ಬರನ್ನು ಇಟ್ಟುಬಿಡಿ. ಅದರಿಂದ ಬೊಕ್ಕಸಕ್ಕೆ, ಸರ್ಕಾರಕ್ಕೆ ಹಣ ಉಳಿಸಿದರೆ ಒಳ್ಳೆಯದಾಗುತ್ತದೆಂದು ಸರ್ಕಾರಕ್ಕೆ ಹೇಳುತ್ತಾ ಇದ್ದೇನೆ.

ಇಷ್ಟೆಲ್ಲಾ ಹೇಳಿ, ಈ ರಿಪೋರ್ಟಿನಲ್ಲಿ ಏನಿದೆ ಅನ್ನತಕ್ಕಂಥ್ದನ್ನು ತಮ್ಮ ಮುಂದೆ ಎರಡು ಮಾತಿನಲ್ಲಿ ಹೇಳುತ್ತೇನೆ. ಈ ಸರ್ವಿಸ್ ಕಮೀಷನ್ನಿನ ಕಾರ್ಯಕರಾಪ ನಡೆಸುವುದಕ್ಕೆ ಒಬ್ಬ ಕಾರ್ಯದರ್ಶಿ ಹುದ್ದೆಯನ್ನು ಇಟ್ಟಿದ್ದಾರೆ. ಒಬ್ಬ ಸೆಕ್ರೆಟರಿ ಅಲ್ಲ ಕೆಲಸಮಾಡುವಂತೆ ಮಾಡಲು ಸರ್ಕಾರಕ್ಕೆ ಶಕ್ತಿ ಕುಂದಿಹೋಯಿತು. ಸೆಕ್ರೆಟರಿ ಅಪಾಯಿಂಟ್ ಮಾಡಿ ಒಬ್ಬರನ್ನು ಅಲ್ಲಗೆ ಪೋಸ್ಟ್ ಮಾಡಿದರು. ಅವರು ಆ ಕೆಲಸಕ್ಕೆ ಹೋಗುವುದಿಲ್ಲವೆಂದರು. ನೇಮಕ ಮಾಡಿದ ಆಫೀಸರ ಮೇಲೆ ಆ ಕೆಲಸವನ್ನು ಬಲವತ್ತರವಾಗಿ ಹೊರಿಸಿ, ಆ ಕೆಲಸಕ್ಕೆ ಹೋಗಿ ಸೇರಿಕೊಳ್ಳಲೇಬೇಕೆಂದಾಗ, ಆ ಅಧಿಕಾರಿ ಹೋಗಿ ಆ ಜಾಗದಲ್ಲಿ 4 ದಿನ ಇದ್ದುಬಿಟ್ಟು ರಜೆ ಹಾಕಿದರು. ಹೀಗಾಗಿ ಸರ್ವಿಸು ಕಮಿಷನ್ನು ಅನೇಕ ತಿಂಗಳುಗಳು ಒಬ್ಬ ಕಾರ್ಯದರ್ಶಿ ಇಲ್ಲದೆ ಕಾರ್ಯ ನಿರ್ವಾಹ ಮಾಡಿತು; ಅದರ ಅಸಿಸ್ಟೆಂಟ್ ಸೆಕ್ರೆಟರಿ ಮೂಲಕ ಕಾರ್ಯ ತೆಗೆದುಕೊಂಡಿತು. ಇದನ್ನು ನೋಡಿದರೆ, ಈ ರಾಜ್ಯದಲ್ಲಿ ತಾವು ಸರ್ವಿಸು ಕಮೀಷನ್ನಿಗೆ ಎಷ್ಟರಮಟ್ಟಿನ ಬೆರೆ ಇಟ್ಟುಕೊಂಡಿದ್ದೀರ, ಅವರ ಕಾರ್ಯ ನೀತಿಗಳಿಗೆ ಎಷ್ಟರಮಟ್ಟಿನ ಗೌರವ ಕೊಟ್ಟಿದ್ದೀರ, ಅವರ ಸ್ಥಾನಮಾನವನ್ನು ಹೇಗೆ ನೋಡುತ್ತಿದ್ದೀರ ಅನ್ನುವುದು ಸ್ಪಷ್ಟವಾಗುತ್ತದೆ. You are looking down upon them, you are giving scant respect to the Commission ಅನ್ನುವುದು ಯಾರಿಗಾದರೂ ಎದ್ದುಕಾಣುತ್ತದೆ. ಸರ್ವಿಸು ಕಮಿಷನ್ನಿನವರು ಅವರ ವರದಿಯಲ್ಲಿ ಈ ಸೆಕ್ರೆಟರಿ ನೇಮಕದ ವಿಚಾರದಲ್ಲಿ ಬರೆದು ಪ್ರಿಂಟು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಾಡಿಸಿರುವುದನ್ನು ಓದಿ ಹೇಳಬೇಕಾಗಿಲ್ಲ. ಇದು ಏನು ತೋರಿಸುತ್ತದೆಂದರೆ ಮೈಸೂರು ರಾಜ್ಯದಲ್ಲಿ ಸರಕಾರ ತಾನು ಮಾಡುವುದು ಸರಿ, ಇನ್ನು ಯಾರು ಮಾಡುವುದೂ ಸರಿಯಲ್ಲ ಅಂತ ಒಂದು ತೀರ್ಮಾನಕ್ಕೆ ಬಂದಿದೆ. ಅದಕ್ಕೊಸ್ಕರ, ತಾನೇ ಮಾಡತಕ್ಕಂಥಾದ್ದು ಸರಿ ಅಂದಮೇಲೆ, ಅನೇಕ ಅಂಗಾಂಗಗಳನ್ನು ಮಾಡಿ ವ್ಯರ್ಥ ಹಣ ವೆಚ್ಚಮಾಡಬೇಡಿ ಎಂದು ಹೇಳುವುದಕ್ಕೊಸ್ಕರ ಇಷ್ಟು ದೀರ್ಘವಾಗಿ ಹೇಳುತ್ತಾ ಇದ್ದೇನೆ.

ನಿನ್ನೆ ದಿನ ರಿಕ್ರೂಟ್‌ಮೆಂಟ್ ಪಾಲಸಿ ಹಾಗಿರಬೇಕು, ಎಕ್ಸಾಮಿನೇಷನ್ ಹಾಗಿರಬೇಕು, ಪ್ರಮೋಷನ್ ಹಾಗಿರಬೇಕು, ಎಕ್ಸ್‌ಟೆನ್‌ಷನ್ ಕೊಡಬೇಕೇ ಬಿಡಬೇಕೇ, ಕೊಟ್ಟರೆ ಯಾವಾಗ ಕೊಡಬೇಕು ಎನ್ನತಕ್ಕ ಎಲ್ಲಾ ವಿಷಯಗಳ ಮೇಲೂ ಮಾನ್ಯ ಸದಸ್ಯರು ಅನೇಕ ಜನ ಈ ಕಡೆ ಆ ಕಡೆ ಮಾತನಾಡಿದ್ದಾರೆ. ಸರ್ಕಾರ ಯಾವ ಒಂದು ಮಟ್ಟದಲ್ಲಿ ಈ ಒಂದು ವಿಷಯವನ್ನು ಯೋಚನೆ ಮಾಡುತ್ತಾ ಇದೆ ಎಂಬುದರ ಬಗ್ಗೆ ಒಂದೆರಡು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದು ಪ್ರಯತ್ನ ಮಾಡುತ್ತೇನೆ. ಯಾರೋ ಒಬ್ಬರು 63 ವರ್ಷ ವಯಸ್ಸಾದವರನ್ನು ಅನಿಮಲ್ ಹಸ್ಬೆಂಡಿರಿ ಇಲಾಖೆಯ ಡೈರೆಕ್ಟರಾಗಿ ಮಾಡಿದ್ದಾರೆಂದು ನಮ್ಮ ಸ್ನೇಹಿತರಾದ ಕಾಶೀಮಠ ಸಿದ್ದಯ್ಯನವರು ಹೇಳಿದರು. ಶ್ರೀ ಸಿದ್ದಯ್ಯನವರು ಈ ಅಸೆಂಬ್ಲಿಯ ಸದಸ್ಯರಾಗುವುದಕ್ಕೆ ಮುಂಚೆ 1957-58ನೇ ಇಸವಿಯಲ್ಲಿ 59 ವರ್ಷ ವಯಸ್ಸಾದವರೊಬ್ಬರನ್ನು ಮಂಡ್ಯದಲ್ಲಿರುವ ಟ್ರೈನಿಂಗ್ ಕಾಲೇಜಿಗೆ ತೆಗೆದುಕೊಂಡುಬಂದಾಗ ಈ ಸಭೆಯಲ್ಲಿ ಪ್ರಶ್ನೋತ್ತರಗಳು ಅಲ್ಪಕಾಲಾವಧಿ ಪ್ರಶ್ನೆಗಳು ಬಂದು ಚರ್ಚೆಯಾದ ಸಮಯದಲ್ಲಿ ಸರ್ಕಾರ ಅವರನ್ನು ಒಂದು ವರ್ಷಕ್ಕೆ ಮಾತ್ರ ಇಟ್ಟುಕೊಳ್ಳುತ್ತೇವೆ, ಯಾರೂ ಸಿಕ್ಕಲಿಲ್ಲ ಆದ್ದರಿಂದ ನೇಮಕ ಮಾಡಿದೆವು ಇನ್ನು ಮುಂದೆ ಮಾಡುವುದಿಲ್ಲ ಎಂದು ಹೇಳಿದ ನಿಜಲಿಂಗಪ್ಪನವರು ಅವತ್ತಿನ ದಿವನ ಅಧಿಕಾರವಮ್ಮು ಬಿಟ್ಟು ಜತ್ತಿಯವರು ಆ ಸ್ಥಾನಕ್ಕೆ ಬಂದು ಆ ಪ್ರಶ್ನೆ ಬಂದಾಗ ಅವರೂ ಅದೇ ವಿಷಯ ಹೇಳಿದರು. ನಿಜಲಿಂಗಪ್ಪನವರು ಯಾವ ಆಶ್ವಾಸನವನ್ನು ಕೊಟ್ಟಿದ್ದರೋ ಅದೇ ಆಶ್ವಾಸನವನ್ನು ಅವರೂ ಕೊಟ್ಟರು. ಅದನ್ನು ರ್ಯಾಟಿಫೈ ಮಾಡುವುದಕ್ಕೆ ಪಬ್ಲಿಕ್ ಸರ್ವಿಸ್ ಕಮಿಷನ್ ಮುಂದೆ ಸರ್ಕಾರ ನೀಡಿರತಕ್ಕ ಒಂದು ರಿಪೋರ್ಟ್ ಇದರಲ್ಲಿ ಇದೆ. 123 ಜನ ಪೋಲೀಸ್ ಇನ್‌ಸ್ಪೆಕ್ಟರುಗಳನ್ನು ಸೂಪರ್‌ಸೀಡ್ ಮಾಡಿ ಒಬ್ಬರಿಗೆ ಬಹಳ ದಕ್ಷರು ಎಂದು ಪ್ರಮೋಷನ್ ಕೊಟ್ಟರತಕ್ಕ ನಿದರ್ಶನ ಇದೆ. ಇದನ್ನು ಅನೇಕ ಸಾರಿ ಶ್ರೀಮಾನ್ ಜತ್ತಿಯವರು ಮುಖ್ಯ ಮಂತ್ರಿಗಳಾಗಿದ್ದಾಗ್ಯೆ ಹೇಳಿದ್ದಕ್ಕೆ ಯೋಗ್ಯತೆ, ದಕ್ಷತೆ, ಮಣ್ಣು, ಮಸಿಗಳ ಮೇಲೆ ಮಾಡುತ್ತೇವೆ ಎಂದು ಹೇಳಿದರು. ಇದನ್ನು ಸರ್ಕಾರ ಯಾವ ಯಾವ ಕಾರಣಕ್ಕಾಗಿ ಮಾಡಿತು? ಇದು ಯಾವ ಸತ್ಯ, ಧರ್ಮ, ನ್ಯಾಯ ಅಂಶ? ಈ ಪಬ್ಲಿಕ್ ಸರ್ವಿಸ್ ಕಮಿಷನ್ನನ್ನು ತಾವೇ ನೇಮಕ ಮಾಡಿದ್ದು, ಅವರು ಕೊಟ್ಟರತಕ್ಕ ರಿಪೋರ್ಟ್‌ನ್ನು ನೋಡಿದರೆ ಇದರಲ್ಲಿ ಸತ್ಯಕ್ಕೆ ದೂರವಾದದ್ದನ್ನು ಸರ್ಕಾರದವರು ಮಾಡಿದ್ದಾರೆ. ನಮ್ಮ ಸ್ನೇಹಿತರಾದ ಶ್ರೀಮಾನ್ ಹೆಗ್ಗಡೆಯವರು ಈ ಪಬ್ಲಿಕ್ ಸರ್ವಿಸ್ ಕಮಿಷನ್ ರಿಪೋರ್ಟ್‌ನ್ನು ಇದೇನೂ ಒಂದು ಬೈಬರ್ ಅಲ್ಲ, ರಾಮಾಯಣ ಅಲ್ಲ ಎಂದು ಹೇಳಿದರು, ನಿಜ. ಸರ್ವಿಸ್ ಕಮಿಷನ್‌ನವರು ಪ್ರತಿಯೊಂದನ್ನೂ ತೂಕ ಇಟ್ಟು ನೀತಿ ನಿಯಮ ಇಟ್ಟು ಹೇಳುತ್ತಾರೆ. ಇದರಲ್ಲಿ ಯಾವ ನೀತಿ ನಿಯಮವೂ ಇಲ್ಲ ಎಂದರೆ ಯಾವ ರಾಜ್ಯಾಂಗದ ಕೆಳಗೆ ಇದನ್ನು ರಚನೆ ಮಾಡಿದ್ದೇವೆಯೋ ಅದಕ್ಕೆ ಗೌರವ ಕೊಟ್ಟಂತೆ ಆಗುವುದಿಲ್ಲ. ಅವರು ಕೊಟ್ಟಂತಹ ರಿಪೋರ್ಟ್‌ನ್ನು ಕನಕ್ಕಿಂತಲೂ ಕಡೆಯಾಗಿ ಕಾಣುವುದಾದರೆ ಇವತ್ತಿನ ದಿವನ ಪಬ್ಲಿಕ್ ಸರ್ವಿಸ್ ಕಮಿಷನ್ ಇರಬೇಕೇ ಬೇಡವೇ ಎಂಬ ಪ್ರಶ್ನೆ ನಮ್ಮ ಮನಸ್ಸಿನಲ್ಲಿ ಉದ್ಭವವಾಗುತ್ತದೆ.

11ನೇ ಪುಟದಲ್ಲಿ

"Cases of re-employment should indeed be rare only under circumstances unavoidable, for posts of extremely technical type, where in spite of adequate efforts, it is found not possible to replace the existing Officer for want of an equally efficient technical hand. The Commission feel that the plea of dearth of technical hands should not be used unreasonably to justify the re-employment or extension in the period of re-employment of retired Officers..."

ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ಪೋಲೀಸ್ ಮ್ಯಾನ್ಯುಯಲ್ ಬರೆಯುವುದಕ್ಕೆ ಒಬ್ಬ ಆಫೀಸರಿಗೆ ಎಕ್ಸ್‌ಟೆನ್‌ಷನ್ ಕೊಡುತ್ತೀರಿ. ಡಾಕ್ಟರುಗಳ ಅಭಾವ ಇದೆ, ಡಾಕ್ಟರುಗಳಿಗೆ ಎಕ್ಸ್‌ಟೆನ್‌ಷನ್ ಕೊಡಿ ರಿಜೈರ್ ಆಗಿದ್ದವರಿಗೆ ರೀ ಎಂಪ್ಲಾಯ್‌ಮೆಂಟ್ ಕೊಡಿ ಎಂದರೆ ಸರ್ಕಾರದವರು ಮಾಡಿರುವುದಾದರೂ ಏನು ? ಇವತ್ತಿನ ದಿನ ಎಷ್ಟು ಜನ ಟೆಕ್ನಿಕಲ್ ಡಿಪಾರ್ಟ್‌ಮೆಂಟಿನಲ್ಲಿ, ಮೆಡಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಆ ರೀತಿ ರೀ-ಎಂಪ್ಲಾಯ್‌ಮೆಂಟ್, ಎಕ್ಸ್‌ಟೆನ್‌ಷನ್ ಪಡೆದಿದ್ದಾರೆ ! ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ಪೋಲೀಸ್ ಮ್ಯಾನ್ಯುಯಲ್ ಬರೆಯುವುದಕ್ಕೆ ಒಬ್ಬ ಆಫೀಸರಿಗೆ ಎಕ್ಸ್‌ಟೆನ್‌ಷನ್ ಕೊಟ್ಟಿದ್ದೀರಿ. ಇನ್ನೊಂದು ವಿಷಯ ಎಂದರೆ ಪಂಚಾಯತ್ ರಾಜ್ಯ ಆಕ್ಟ್ ಬರೆಯುವುದಕ್ಕೆ ಒಬ್ಬ ಡೆಪ್ಯುಟಿ ಸೆಕ್ರೆಟರಿಯವರಿಗೆ ಎರಡುಸಾರಿ ಎಕ್ಸ್‌ಟೆನ್‌ಷನ್ ಕೊಟ್ಟಿದ್ದೀರಿ. ಇದನ್ನು ಏಕೆ ಹೇಳುತ್ತೇನೆ ಎಂದರೆ ಕಾನೂನು ಬರೆಯುವುದಕ್ಕೆ 'ರಾ' ಡಿಪಾರ್ಟ್‌ಮೆಂಟ್ ಇದೆ, ಆದು ಅದಕ್ಕೆ ಸಂಬಂಧಪಟ್ಟ ಖಾತೆ ಅವರಿಗೆ ಎಲ್ಲಾ ಮಾಹಿತಿ ಇದೆ, ಹಾಗಿದ್ದರೂ ರೀ ಎಂಪ್ಲಾಯ್‌ಮೆಂಟ್ ಮತ್ತು ಎಕ್ಸ್‌ಟೆಷ್ಷನ್ ಕೊಡುತ್ತೀರಲ್ಲಾ ಇದರಲ್ಲಿ ನೀತಿ ಏನು ? ನನಗಾದರೂ ಅನಿಸುತ್ತದೆ, ಇದನ್ನು ಹೇಳುವುದರಿಂದ ಯಾರಿಗಾದರೂ ಕಹಿ ಆಗಬಹುದು, ಯಾರ ಮನಸ್ಸಿನ ಮೇಲೆ ಏನಾದರೂ ಆಗಬಹುದು, ಎಕ್ಸ್‌ಟೆಷ್ಷನ್ ಕೊಡುವಾಗ, ರೀ-ಎಂಪ್ಲಾಯ್‌ಮೆಂಟ್ ಕೊಡುವಾಗ ಈ ಎರಡು ವಿಷಯಗಳು ಮಾತ್ರ ಎದ್ದು ಕಾಣುತ್ತವೆ, ಅದು ಯಾವುದು ಎಂದರೆ ಅವನಲ್ಲರತಕ್ಕ ಎಫಿಷಿಯನ್ಸಿಯಾಗಲಿ, ಇಂಟಲಿಜೆನ್ಸ್ ಆಗಲಿ ಯಾವುದೂ ಕೂಡ ಗಣನೆಗೆ ಬರುವುದಿಲ್ಲ, ಅವನಿಗೆ ಇನ್‌ಫ್ಲೂಯನ್ಸ್ ಇರಬೇಕು ಇಲ್ಲದೆ ಹೋದರೆ ಅವನು ಇಲ್ಲರತಕ್ಕ ಯಾವುದಾದರೂ ಒಂದು ಜಾತಿಯ ಹಿಂದುಗಡೆ ಇರಬೇಕು. ಈ ಜಾತಿ ಮತ್ತು ಇನ್‌ಫ್ಲೂಯನ್ಸ್ ಎರಡೂ ಇಲ್ಲದೇ ಹೋದರೆ ಎಕ್ಸ್‌ಟೆಷ್ಷನ್ ಸಿಕ್ಕುವುದಿಲ್ಲ ; ರೀ ಎಂಪ್ಲಾಯ್‌ಮೆಂಟ್ ಸಿಕ್ಕುವುದಿಲ್ಲ ಎಂದಮೇಲೆ ಈ ಸರ್ಕಾರ ಯಾವ ಮಾರ್ಗ ಹಿಡಿದಿದೆ ? ಸರ್ಕಾರದವರು ವಾಮ ಮಾರ್ಗವನ್ನು ಹಿಡಿದಿರುವಾಗ ನರ್ವಿಸ್ ಕಮಿಷನ್ ರಿಪೋರ್ಟ್ ಕೊಟ್ಟಿರುವಾಗ ಅವರ ಮೇಲೆ ನಮ್ಮ ಸ್ನೇಹಿತರು ಏಕೆ ಖಾರ ಕಾರುತ್ತಾರೆಯೋ ಗೊತ್ತಾಗುವುದಿಲ್ಲ. ಎಕ್ಸ್‌ಟೆನ್‌ಷನ್ ಕೊಟ್ಟಿರುವುದನ್ನು ನೋಡಿದರೆ ಟೆಕ್ನಿಕಲ್ ಡಿಪಾರ್ಟ್‌ಮೆಂಟಿನವರಿಗೆ ಕೊಟ್ಟಿಲ್ಲ, ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರಿಗೆ ಕೊಟ್ಟಿಲ್ಲ. ಇವತ್ತು ಇಂಜಿನಿಯರಿಂಗ್ ಗ್ರ್ಯಾಜುಯೇಟ್ ಅಭಾವ ಇದೆ ಎಂದರೆ ಅಲ್ಲಿ ಎಕ್ಸ್‌ಟೆಷ್ಷನ್ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಯಾರೋ ತಮ್ಮವರಿಗೆ ಪ್ರಮೋಷನ್ ಕೊಡುವಾಗ ಈ ನೀತಿಯನ್ನು ಅನುಸರಿಸುತ್ತೀರಿ. ಇದನ್ನೆಲ್ಲಾ ಏಕೆ ಹೇಳುತ್ತೇನೆ ಎಂದರೆ ಈ ವರಿದಿಯ ಹಿಂದೆ ಅಡಗಿರತಕ್ಕ ಈ ಅಂಶಗಳನ್ನೆಲ್ಲಾ ಸ್ವಲ್ಪ ಯೋಚನೆ ಮಾಡಬೇಕು. ಅದಕ್ಕೇ ಸರ್ಕಾರ ರೀ-ಎಂಪ್ಲಾಯ್‌ಮೆಂಟ್ ಕೊಡುವಾಗ ಈ ಆಯೋಗದವರು ಏನು ಹೇಳಿದ್ದಾರೆ ಅದನ್ನು ಚಾಚೂ ತಪ್ಪದಂತೆ ಪಾಲಿಸುತ್ತೀರಿ ಎಂದು ತಿಳಿದುಕೊಂಡಿದ್ದೇನೆ.

ಪುಟ 12ರಲ್ಲಿ "The Government approached the Commission for the third time on 10th March 1960 for concurrence to the promotion of six Assistant Commercial Tax Officers as Commercial Tax Officers, and were informed that these promotions could not be agreed to for the reasons already explained to them"...

ಎಂದು ಹೇಳಿದ್ದಾರೆ. ಇದನ್ನು ನಾವು ಒಂದು ಗಂಟೆ ಎರಡು ಗಂಟೆ ಈ ಸಭೆಯಲ್ಲಿ ವಾದ ಮಾಡಿದ್ದೇವೆ ಅವತ್ತಿನ ದಿವನ ಹಣಕಾಸಿನ ಸಚಿವರು ಏನು ಹೇಳುತ್ತಾ ಇದ್ದರು ಎಂದರೆ ತಮ್ಮ ಅಳಿಯನಿಗೆ ಕೆಲಸ ಸಿಕ್ಕುತ್ತದೆ ಎಂದು ತಿಳಿದುಕೊಂಡು ನಾನು ಮಾಡಿದ್ದೇ ಸರಿ ಎಂದು ಅವರು ವಾದ ಮಾಡಿದರು :

"On 30th March 1960, the Government again sought the concurrence of the Commission to the promotion of six officials from the ministerial cadre as Commercial Tax Inspectors in October 1959 as Assistant Commercial Tax Officers on the *ground that the Commercial* Tax Inspectors who were recruited recently, had hardly put in 4 or 5 months' service and were thus unable to shoulder the responsibilities of Class II Posts."

ನಿನ್ನೆಯ ದಿವನ ಮಾನ್ಯ ಸ್ನೇಹಿತರು ಇದರಲ್ಲಿ ಮೆಮೋರ್ಯಾಂಡಂ ಕೊಟ್ಟಿದ್ದಾರೆ ಅದನ್ನು ನಾನು ಓದುವುದಿಲ್ಲ ಎಂದು ಹೇಳಿದರು ಇದು ಒಂದು ಕುಂಟು ನೆಪ, ನಾವು ಮಾಡಿದ್ದೇವೆ ಆದ್ದರಿಂದ ಇದನ್ನು ಒಪ್ಪಿಕೊಳ್ಳಬೇಕೆಂದು ಸರ್ಕಾರ ಏನಾದರೂ ಒಂದು ಎಕ್ಸ್‌ಪ್ಲನೇಷನ್ ಕೊಡುತ್ತದೆ, ಇದನ್ನು ಪ್ರಶ್ನೆ ಮಾಡುವವರು ಯಾರು ಎಂದರೆ ಜನ. ಕಾನೂನು ಪ್ರಕಾರ ಸರ್ಕಾರದವರನ್ನು ಪ್ರಶ್ನೆ ಮಾಡುವುದ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಕ್ಕಾಗುವುದಿಲ್ಲ. ಆ ರೀತಿ ಪ್ರಶ್ನೆ ಮಾಡಬೇಕಾದರೆ ಪ್ಯೆಯಕ್ತಿಕವಾಗಿ ಹೈಕೋರ್ಟಿನಲ್ಲಿ ರಿಟ್ ಹೋಗಿ ಪ್ರಶ್ನೆ ಮಾಡಬೇಕು. ಈ ಸರ್ಕಾರವನ್ನು ತೆಗೆದುಹಾಕಬೇಕೆಂದರೆ ಜನ ನಿರ್ಧಾರ ಮಾಡಬೇಕು, ಜನ ನಿರ್ಧಾರ ಮಾಡುವುದಕ್ಕೆ ನಿಮ್ಮ ಕಡೆ ಜನ ಇದ್ದಾರೆ ಎಂದು ನಿಮ್ಮ ಮನಸ್ಸಿಗೆ ಬಂದ ಹಾಗೆ ಕಾನೂನು ಮಾಡಿ ನಿಮ್ಮ ಮನಸ್ಸಿಗೆ ಬಂದ ಹಾಗೆ ಪ್ರವೋಷ್ಟ್ ಕೊಟ್ಟು ನಿಮ್ಮ ಮನಸ್ಸಿಗೆ ಬಂದ ಹಾಗೆ ಅಧಿಕಾರ ಮಾಡುವ ಪ್ರವೃತ್ತಿ ಏನಿದೆ ಅದನ್ನು ಬಿಡಬೇಕೆಂದೇ ಈ ಕಮಿಷನನ್ನು ಇಟ್ಟಿರುವುದು. ಆದ್ದರಿಂದ ಈ ಕಮಿಷನ್ ಏನು ಒಂದು ಆ ದೇಶವನ್ನು ಕೊಡುತ್ತದೆ ಅದನ್ನು ಮುಂದಾದರೂ ಒಪ್ಪಿ ಕೊಳ್ಳುವ ಒಂದು ಹೆಜ್ಜೆ ಇಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಸ್ನೇಹಿತರಾದ ಶ್ರೀಮಾನ್ ಹೆಗ್ಗಡೆಯವರು 'May' ಎನ್ನುವುದಕ್ಕೂ ಮತ್ತು 'Shall' ಎನ್ನುವುದಕ್ಕೂ ವ್ಯಾಖ್ಯಾನ ಮಾಡಿದರು. 'May' ಎನ್ನುವುದು 'Shall' ಆಗುತ್ತದೆ. 'Shall' ಎನ್ನುವುದು 'May' ಆಗುತ್ತದೆ ಎಂದು ಹೇಳಿದರು. ಮಾಡಲೇಬೇಕೆಂದು ಮ್ಯಾಂಡೇಟರಿ ಪ್ರೊವಿಜನ್ ಇದೆಯಲ್ಲಾ ಹಾಗಿದ್ದೂ ಕೂಡ ಏಕೆ ಮಾಡಲಿಲ್ಲ ಎಂದು ಹೇಳುತ್ತೇನೆ :—

Page 19.

"In letter No R1 1032 61-62 PSC, dated 31st May 1961, the Commission had recommended, among others, three candidates for appointments as Lecturers in Physiology, Anaesthesiology and Physiology, but Government appointed them as Lecturers in altogether different subjects, *viz.*–Medicine, E.N.T. and Ophthalmology respectively, without prior consultation with the Commission."

ಮುನ್ಸೀಫರಾಗುವುದಕ್ಕೆ ರಾಯಿಖ್ ಆಗಿದ್ದಾರೆಂದು ಪಬ್ಲಿಕ್ ಸರ್ವಿಸ್ ಕಮಿಷನ್ ತಿಳಿಸಿದರೆ ಅವರನ್ನು ಸಬ್-ಇನ್‌ಸ್ಪೆಕ್ಟರನ್ನಾಗಿ ನೇಮಿಸಲು ಸೂಚನೆ ಕೊಟ್ಟರಿ. ಯಾವ ವಿಷಯದಲ್ಲಿ ಯಾರು ಅನುಭವ ಪಡೆದು ಯಾವುದಕ್ಕೆ ರಾಯಿಖ್ ಆಗಿದ್ದಾರೋ ಅವರನ್ನು ಅದಕ್ಕೆ ಸಂಬಂಧಪಟ್ಟ ನೌಕರಿಗೆ ನೇಮಿಸದೆ ಕಮಿಷನ್ನಿನ ಸೂಚನೆಯನ್ನು ಗಮನಿಸದೆ ಮೆಡಿಸಿನ್ನಿಗೆ ಸಂಬಂಧಪಟ್ಟ ಕೆಲಸಕ್ಕೆ ಇ. ಎನ್. ಟಿ. ವಿಭಾಗಕ್ಕೆ, ಆಪ್ತಾಲ್ಮಿಕ್ ವಿಭಾಗ ಮುಂತಾದುವಕ್ಕೆ ನೇಮಿಸಿದಿರಿ. ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಆದೇಶವನ್ನು ಸರ್ಕಾರ ಗೌರವಿಸದಿರುವಾಗ ಆ ಕಮಿಷನ್ನನ್ನು ನೇಮಿಸಿರುವುದರಿಂದ ಪ್ರಯೋಜನವೇನು ?

20ನೆಯ ಪುಟದಲ್ಲಿ 3ನೆಯ ಪ್ಯಾರಾದಲ್ಲಿ ಈ ರೀತಿ ಇದೆ :

"These were totally untenable arguments. That these appointments did not involve any change in the Class of Service and that therefore did not require consultation with the Commission, could not be accepted as these appointments were in conflict with the Cadre and Recruitment Rules."

ಇಲ್ಲಿ ಹೇಳಿರುವುದು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲ ಎಂದು. ವಿದ್ಯಾಭ್ಯಾಸ, ಮೆಡಿಕಲ್, ರೆವೆನ್ಯೂ ಮುಂತಾದ ಯಾವ ಇಲಾಖೆಯನ್ನು ತೆಗೆದುಕೊಂಡರೂ ರೂಲ್ಸ್ ಫ್ರೇಮ್ ಮಾಡಿಲ್ಲ, ಈ ದಿವಸ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಯಾವುದೋ ಒಂದು ನೆಪ ಹೂಡಿ ರೂಲ್ಸ್‌ಗೆ ವಿರೋಧವಾಗಿತ್ತು ಎಂದು ಹೇಳುತ್ತಾರೆ. ರೂಲ್ಸ್ ನೋಡಿದರೆ ಇಲ್ಲವೇ ಇಲ್ಲ. ನೀವು ಹೇಳಿದ್ದನ್ನು ನಾವು ಒಪ್ಪಬೇಕು. ನಾವೇನೋ ಕೇಳಿಕೊಂಡು ಹೋಗುತ್ತೇವೆ. ಆದರೆ ಜನರ ಪ್ರತಿಕ್ರಿಯೆ ಏನು ಎಂಬುದನ್ನು ಬಹಳ ತೀವ್ರವಾಗಿ ಗಮನಿಸಬೇಕು. ಇದರಿಂದ ಕಮಿಷನ್ನನ್ನು ಗೌರವದಿಂದ ಕಾಣುತ್ತಿಲ್ಲ ಎಂಬುದು ವ್ಯಕ್ತವಾಗುತ್ತದೆ.

ಇನ್ನೊಂದು ವಿಷಯ.

On page 28 it is stated :

"Because of the absence of Cadre and Recruitment Rules in respect of certain important Departments, appointments and promotions therein continue to be made on an *ad hoc* basis, which are liable to affect the rights of employees in these Departments and thereby create dissatisfaction and a sense of frustration among them and also lead to inefficiency. It is more than six years that the New Mysore State was formed and the Commission are at a loss to understand the nature and extent of difficulties that come in the way of finalisation and promulgation of these rules even after such a length of time."

ಇದು ಬಹಳ ಮುಖ್ಯವಾದುದು. ಈ ಸಭೆಯಲ್ಲಿ ಎಷ್ಟೋ ಸಾರಿ ಪ್ರಶ್ನೆ ಬಂದಾಗ ಉತ್ತರ ಹೇಳಿದ್ದನ್ನು ತಾವು ಕೇಳಿದ್ದೀರಿ. ಯಾವ ನೇಮಕ ಹೇಗೆ ಮಾಡಿದ್ದೀರಿ, ಕೊಂಕಣಿ ಸುತ್ತಿ ಮೈಲಾರಕ್ಕೆ ಹೋದ ಹಾಗೆ ಏನು ಮಾಡಿದ್ದೀರಿ ಎಂಬುದು ಗೊತ್ತಾಗಿದೆ. ಇದನ್ನು ನೋಡಿದರೆ 5 ಜನ ಸದಸ್ಯರಿಗಿಟ್ಟು ಕಮಿಷನ್ನಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುವುದಕ್ಕಿಂತ ಬೇಕಾದ ಸಮಿತಿ ಮಾಡಿ ಈ ಪಬ್ಲಿಕ್ ಸರ್ವಿಸ್ ಕಮಿಷನ್ನನ್ನು ಸ್ಕ್ರ್ಯಾಪ್ ಮಾಡುವುದು ಒಳ್ಳೆಯದೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸರ್ಕಾರದವರು ಪಬ್ಲಿಕ್ ಸರ್ವಿಸ್ ಕಮಿಷನನ್ನು ನೇಮಕಮಾಡುವಾಗ ಯಾರು ಸರ್ಕಾರಿ ಪಕ್ಷಕ್ಕೆ ಬೆಂಬಲ ಕೊಟ್ಟುಕೊಂಡು ಸಹಾಯ ಮಾಡಿಕೊಂಡಿದ್ದರೋ ಅವರನ್ನೇ ಕಮಿಷನ್ ಸದಸ್ಯರನ್ನಾಗಿ ನೇಮಿಸಿರುತ್ತಾರೆ. ಹಿಂದೆ ಅಧಿಕಾರದಲ್ಲಿದ್ದು..... ...:

Mr. SPEAKER.—I do not permit any comment on the individual Member of the Public Service Commission in any manner whatsoever.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಕಮಿಷನ್ನಿನಲ್ಲಿ ಸದಸ್ಯರಾಗಿರುವವರು ಹಿಂದೆ ಆಡಳಿತ ಪಕ್ಷಕ್ಕೆ ಸಹಾಯಕರಾಗಿದ್ದು ಒಂದೆರಡು ಚುನಾವಣೆಗಳಲ್ಲಿ ಗೆದ್ದು ಕೆಲವು ಸಲ ಸೋಲು ಕೆಲಸವಿಲ್ಲದಿದ್ದಾಗ ಅವರಿಗೆ ಉದ್ಯೋಗ ಒದಗಿಸಬೇಕೆಂಬ ದೃಷ್ಟಿಯಿಂದ ದೀರ್ಘವಾಗಿ ಆಲೋಚನೆ ಮಾಡಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಅಂಥವರಿಗೆ ಸ್ಥಾನಮಾನ ಕೊಟ್ಟರು. ಅಂಥವರೇ ಸರ್ಕಾರದ ವಿರುದ್ಧವಾಗಿ ಬರೆದರೆ ಸರ್ಕಾರದ ನೀತಿಯಲ್ಲಿ ಅನೇಕ ಲೋಪದೋಷಗಳಿವೆಯೆಂದು ತಮ್ಮ ವರದಿಯಲ್ಲಿ ಹೇಳಿದರೆ ಇನ್ನು ಸಾಮಾನ್ಯ ಜನರು ಎಷ್ಟು ಬೇಸರ ಪಟ್ಟುರಬೇಕು ಎಂಬ ಅಂಶವನ್ನು ಸರ್ಕಾರದವರು ಮತ್ತು ಈ ಸಭೆಯ ಮಾನ್ಯ ಸದಸ್ಯರು ಗಮನಿಸಬೇಕು. ಇಂಥ ಹತ್ತು ವರಧಿಗಳನ್ನು ತಯಾರಿಸುವುದಕ್ಕೆ ಬೇಕಾದ ಅಂತಗಳು ಕಮಿಷನ್ನಿನವರಲ್ಲೂ ಮತ್ತು ಸಾರ್ವಜನಿಕರಲ್ಲೂ ಇವೆ. ಅನೇಕ ಸಂದರ್ಭದಲ್ಲಿ ಪ್ರೊಬೇಷನರುಗಳನ್ನು ತೆಗೆದುಕೊಂಡಿದ್ದಾರೆ. ಹತ್ತಾರು ವರ್ಷಗಳ ಸರ್ವಿಸ್ ಮಾಡಿ ಉತ್ತಮ ರೀತಿಯಲ್ಲಿ ಕೆಲಸ ಮಾಡಿರುವವರಿಗೆ ಅಂಥ ಸಂದರ್ಭದಲ್ಲಿ ಅವಕಾಶ ಕೊಡದೆ ಮಾಜಿ ಮಂತ್ರಿಗಳ ಅಳಿಯಂದಿರು, ಮುಂದೆ ಮಂತ್ರಿಗಳಾಗುವವರ ಅಣ್ಣನ ಮಗ ಮುಂತಾದವರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಆಫೀಸುಗಳಲ್ಲಿ ಕಾಗದಪತ್ರಗಳ ವಿಲೇವಾರಿ ನಿಧಾನವಾಗಿ ಆಡಳಿತ ಕೆಡುವುದಕ್ಕೆ ಕಾರಣ ಸೀನಿಯಾರಿಟಿ ಲಿಸ್ಟ್ ಮಾಡುವಾಗ ಬೇಕಾದವರಿಗೆ ಅನುಕೂಲಮಾಡಿ ಬೇಕಿಲ್ಲದವರನ್ನು ಒಂದು ವರ್ಷ ಮುಂಚೆಯೇ ಮನೆಗೆ ಕಳುಹಿಸಿದ್ದಾರೆ. ಇದರಿಂದ ಯಾವ ಆಫೀಸಿಗೆ ಹೋದರೂ ನೌಕರರು ತಮಗೆ ಬಡ್ತಿ ದೊರೆಯಲಿಲ್ಲ. 1,800 ರೂಪಾಯಿಗಳ ಗ್ರೇಡು ಸಿಕ್ಕಲಿಲ್ಲ, ತಹಸೀಲ್‌ದಾರರ ಹುದ್ದೆಗೆ ಅವಕಾಶ ದೊರೆಯಲಿಲ್ಲ ಎಂದು ದೂರಿಕೊಳ್ಳುವುದೇ ಜಾಸ್ತಿಯಾಗಿದೆ. ವಿಶಾಲ ಮೈಸೂರಾದ ಮೇಲೆ ಹಳೆಯ ಮೈಸೂರಿನ ಅಧಿಕಾರಿಗಳಿಗೆ ಎಷ್ಟು ಅನ್ಯಾಯವಾಗಿದೆ ಎಂಬುದನ್ನು ಸೀನಿಯಾರಿಟಿ ಪಟ್ಟಿ ನೋಡಿದರೆ ಗೊತ್ತಾಗುತ್ತದೆ. ಹೊರಗಿನಿಂದ ಬಂದ ಎಸ್.ಎಸ್.ಎಲ್.ಸಿ. ಆಗಿರುವ ನೌಕರರನ್ನು ಹಳೆಯ ಮೈಸೂರಿನಲ್ಲಿ 20 ವರ್ಷಗಳ ಸರ್ವಿಸ್ ಮಾಡಿ ಪದವೀಧರರಾಗಿರುವ ನೌಕರರ ಮೇಲೆ ಹಾಕಿದ್ದಾರೆ. ಅವರಿಗೆ ಬರೀ ಉರ್ದು ಭಾಷೆ ಮಾತ್ರ ಬರುತ್ತದೆ, ಕೆಲವರಿಗೆ ಒಂದೆರಡು ಇಂಗ್ಲಿಷು ಪದಗಳು ಬರಬಹುದು ಅಷ್ಟೆ. ಗುಮಾಸ್ತರು ಅದರಲ್ಲೂ ಎರಡನೆಯ ದರ್ಜೆಯವರು ಒಂದು ನೋಟ್ ಹಾಕಿದರೆ ಯೆಸ್ ಅಥವಾ ನೋ ಎಂದು ಮಾತ್ರ

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

